downloaded from: www.kpscvaani.com


# ಸಾಮಾನ್ಯ ಕನ್ನಡ

## ಪಿ.ಡಿ.ಒ., ಎಫ್.ಡಿ.ಎ., ಎಸ್.ಡಿ.ಎ.

## ಮೊದಲಾದ ಗ್ರೂಪ್ 'ಸಿ'

## ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳ

## ಪರೀಕ್ಷೆಗಳಿಗಾಗಿ

# ಜ್ಞಾನಗಂಗೋತ್ರಿ

**ಸ್ಪರ್ಧಾತ್ಮಕ ತರಬೇತಿ ಕೇಂದ್ರ, ವಿಜಯನಗರ, ಬೆಂಗಳೂರು.**

# 9916399276

downloaded from: www.kpscvaani.com


## ಪರಿವಿಡಿ

1. ಕನ್ನಡ ವರ್ಣಮಾಲೆ
2. ನಾಮಪದಗಳು
3. ಸರ್ವನಾಮ
4. ಲಿಂಗ
5. ವಚನ
6. ವಿಭಕ್ತಿ ಪ್ರತ್ಯಗಳು
7. ಕ್ರಿಯಾಪದ
8. ಸಂಧಿಗಳು
9. ಸಮಾಸಗಳು
10. ಸಾಧಿತ ಶಬ್ದಗಳು
11. ಅವ್ಯಯ ಪದಗಳು
12. ಅಲಂಕಾರ
13. ಕರ್ತರಿ ಕರ್ಮಣಿ ಪ್ರಯೋಗ
14. ರಗಳೆ
15. ಷಟ್ಪದಿ
16. ದ್ವಿರುಕ್ತಿ
17. ಪದಗಳ ಅರ್ಥ
18. ತತ್ಸಮ ತದ್ಭವ
19. ಶುದ್ಧ ಬರಹ/ಸರಿಯಾದ ಪದಬಳಕೆ
20. ನುಡಿಗಟ್ಟುಗಳು
21. ವಿರುದ್ಧ ಪದಗಳು
22. ಜೋಡಿ ಪದಗಳು
23. ಪ್ರತಿಧ್ವನಿ ಪದಗಳು
24. ಗಾದೆಗಳು
25. ದೇಶೀಯ ಮತ್ತು ಅನ್ಯ ದೇಶ್ಯ ಪದಗಳು
26. ಪ್ರಶಸ್ತಿಗಳು
27. ವಿವಿಧ ಸಾಹಿತ್ಯ ಪ್ರಕಾರದ ಕವಿಗಳು
28. ಪ್ರಾಚೀನ ವಚನಕಾರರು ಮತ್ತು ಅಂಕಿತಗಳು
29. ಕನ್ನಡದ ಕೆಲವು ಬಿರುದಾಂಕಿತಗಳು
30. ಕನ್ನಡ ಕವಿಗಳು ಮತ್ತು ಅವರ ಕಾವ್ಯನಾಮಗಳು
31. ಪ್ರಮುಖ ನಾಟಕಗಳು
32. ಪ್ರಮುಖ ಕಾದಂಬರಿಗಳು
33. ಆತ್ಮಕಥೆಗಳು
34. ಪ್ರವಾಸಿ ಕಥನಗಳು
35. ಕನ್ನಡ ವ್ಯಾಕರಣ ಗ್ರಂಥಗಳು
36. ಕವಿಗಳ ಪ್ರಮುಖ ಸಾಲುಗಳು
37. ಕವಿಗಳು ಮತ್ತು ಕೃತಿಗಳು
38. ಕರ್ನಾಟಕಕ್ಕೆ ಸಂಬಂಧಿಸಿದ ಸಾಮಾನ್ಯ ಜ್ಞಾನ

downloaded from: www.kpscvaani.com


'ಇಸಿಲ' ಎಂಬ ಪದ 'ಬ್ರಹ್ಮಗಿರಿ' ಶಾಸನದಿಂದ ದೊರಕಿದೆ. 'ಇಸಿಲ' ಎಂಬುದು ಒಂದು ಊರಿನ ಹೆಸರು. ಇದು ಕನ್ನಡದ "ಮೊಟ್ಟ ಮೊದಲ ಕನ್ನಡ ಪದ" ವಾಗಿದೆ.
ಕನ್ನಡದ ಮೊದಲ ರಾಷ್ಟ್ರಕವಿ ಗೋವಿಂದ ಪೈ. ಇವರ ಪ್ರಕಾರ ಕನ್ನಡ ಭಾಷೆಯನ್ನು ತಿಳಿದುಕೊಳ್ಳಲು ಇರುವ ಮೊದಲ ಶಾಸನವೇ 'ಹಲ್ಮಿಡಿ ಶಾಸನ' ಇದೊಂದು 'ಗದ್ಯ ಶಾಸನವಾಗಿದೆ' ಇದು ಕದಂಬರ ಕಾಲದ ಶಾಸನವಾಗಿದ್ದು (ಕನ್ನಡ ನಾಡನ್ನು ಆಳ್ವಿಕೆ ಮಾಡಿದ ಮೊದಲ ರಾಜವಂಶ) ಈ ಶಾಸನವನ್ನು 1936ರಲ್ಲಿ ಸಂಶೋಧಕರಾದ ಡಾ. ಎಮ್.ಹೆಚ್. ಕೃಷ್ಣರವರು ಪತ್ತೆ ಹಚ್ಚಿದರು.

**ಹಲ್ಮಿಡಿ ಶಾಸನದಲ್ಲಿ ಕಂಡು ಬರುವ ಪ್ರಮುಖ ಕನ್ನಡ ಪದಗಳು**

* ಪೊಗಳೆ ಪಟ್ಟಣ (ಹೊಗಳಲ್ಪಟ್ಟನು)
* ಬಾಳ್ಗಮ್ಚಿ (ಳ್ಚು)
* ಪೆತ್ತ ಜಯನ್
* ಬಾಳ್ (ಖಡ್ಗ, ಕತ್ತಿ)
* ಕಮ್ಚಿ (ಳ್ಚು) – ತೊಳೆದ

ಕನ್ನಡ ಸಾಹಿತ್ಯ ರಚನೆ ತಿಳಿಯಲು ಇರುವ ಇನ್ನೊಂದು ಶಾಸನವೇ 'ಬಾದಾಮಿ ಶಾಸನ' (ಕ್ರಿ.ಶ.700). ಈ ಶಾಸನದಲ್ಲಿ 3 ತ್ರಿಪದಿಗಳಿದ್ದು ಇದು ಅಚ್ಚ ಕನ್ನಡ ಭಾಷೆಯಲ್ಲಿದೆ. ಇದನ್ನು 'ಕನ್ನಡ ಸಾಹಿತ್ಯದ ತಲಕಾವೇರಿ' ಎಂದೇ ಪ್ರಸಿದ್ಧವಾಗಿದೆ. ಈ ಬಾದಾಮಿ ಶಾಸನ.
ಚಿತ್ರದುರ್ಗ ಜಿಲ್ಲೆಯ 'ತಮಟಕಲ್ಲು' ಎಂಬ ಊರಿನಲ್ಲಿ ದೊರಕಿರುವ 'ತಮಟಕಲ್ಲು ಶಾಸನದಲ್ಲಿ' ವೃತ್ತ ಇದ್ದು 'ಗುಣಮಧುರ' ಎಂಬ ವೀರನ ಬಗ್ಗೆ ಸ್ತುತಿಸಲಾಗಿದೆ.

ಕನ್ನಡದ ಮೊದಲ ಕೃತಿ ಎಂದೇ ಪ್ರಸಿದ್ಧವಾದ 'ಕವಿರಾಜಮಾರ್ಗ' ಇದರ ಕಾಲ ಕ್ರಿ.ಶ. 850. ಇದೊಂದು ಲಕ್ಷಣಗ್ರಂಥವಾಗಿದ್ದು ಇದು ಕಾವ್ಯದ ಲಕ್ಷಣಗಳನ್ನು ಹಾಗೂ ಅಲಂಕಾರವನ್ನು ವರ್ಣಿಸುವ ಕೃತಿ. ಈ ಕೃತಿಯನ್ನು ಪೂರ್ಣವಾಗಿ 'ಕಂದಪದ್ಯ' ದಲ್ಲಿ ಬರೆಯಲಾಗಿದೆ. ದಂಡಿಯ ಕಾವ್ಯಾದರ್ಶವನ್ನ ಆಧಾರವಾಗಿಟ್ಟುಕೊಂಡು ರಚಿಸಲಾಗಿದೆ. ಕನ್ನಡದ ಮೊಟ್ಟ ಮೊದಲ ಕಾವ್ಯ 'ಆದಿಪುರಾಣ'.

## ಕನ್ನಡ ವ್ಯಾಕರಣ

### 1. ಕನ್ನಡ ವರ್ಣಮಾಲೆ

ಕನ್ನಡದ 'ವೈಯ್ಯಾಕರಣಿ', ಕೇಶೀರಾಜನ ಶಬ್ದಮಣಿದರ್ಪಣದ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿ 47 ಅಕ್ಷರಗಳಿವೆ. ಆದರೆ ಪ್ರಸ್ತುತ ಕನ್ನಡ ವರ್ಣಮಾಲೆಯಲ್ಲಿ 49 ಅಕ್ಷರಗಳಿವೆ. ಅವುಗಳೆಂದರೇ,

ಅ ಆ ಈ ಈ ಉ ಊ ಋ ಎ ಏ
ಐ ಒ ಓ ಔ ಅಂ ಅಃ
ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ವ
ಯ ರ ಲ ವ ಶ ಷ ಸ ಹ ಳ

**ಕನ್ನಡ ವರ್ಣಮಾಲೆಯನ್ನು ಮುಖ್ಯವಾಗಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಒಟ್ಟು (49)**

1) ಸ್ವರಗಳು – 13
2) ವ್ಯಂಜನಗಳು – 34
3) ಯೋಗವಾಹಕಗಳು – 2
ಒಟ್ಟು– 49

## I. ಸ್ವರಗಳು – 13

ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಸ್ವರಾಕ್ಷರಗಳು ಎಂದು ಕರೆಯುತ್ತಾರೆ. ಅವುಗಳೆಂದರೆ,

ಅ ಆ ಇ ಈ ಉ ಊ ಋ ಎ ಏ ಐ ಒ
ಓ ಔ – 13

**ಸ್ವರಗಳಲ್ಲಿ 2 ವಿಧ**

**1) ಹ್ರಸ್ವಸ್ವರ:– 6**

ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರಗಳನ್ನು ಹ್ರಸ್ವಸ್ವರ ಎನ್ನುವರು.
ಉದಾ: ಅ ಇ ಉ ಋ ಎ ಒ = 6

**2) ದೀರ್ಘಸ್ವರ:– 7**

ಎರಡು ಮಾತ್ರೆಯ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳು.
ಉದಾ: ಆ ಈ ಊ ಏ ಐ ಓ ಔ = 7

**ಪ್ಲುತಸ್ವರ:–**

ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳು.
[ಇಲ್ಲಿ ದೀರ್ಘಸ್ವರವನ್ನೇ ಮತ್ತಷ್ಟು ಎಳೆದು ಉಚ್ಚರಿಸಲಾಗುತ್ತದೆ]

ಉದಾ: ಅಯ್ಯೋss, ಅಣ್ಣಾss


www.iasjnana.com 9916399276

downloaded from: www.kpscvaani.com


**II. ವ್ಯಂಜನಗಳು (ಅಪೂರ್ಣ) – 34**

ಯಾವುದೇ ವ್ಯಂಜನ ಪೂರ್ಣ ಅಕ್ಷರವಾಗಬೇಕಾದರೆ ಸ್ವರಗಳ ಸಹಾಯ ಬೇಕೇ ಬೇಕು.

ವ್ಯಂಜನಗಳಲ್ಲಿ 2 ವಿಧ
1) ವರ್ಗೀಯ ವ್ಯಂಜನ – 25
2) ಅವರ್ಗೀಯ ವ್ಯಂಜನ – 9
ಒಟ್ಟು – 34

**1) ವರ್ಗೀಯ ವ್ಯಂಜನ – 25**

'ಕ' ಕಾರದಿಂದ 'ಮ' ಕಾರದ ವರೆಗಿನ ಒಟ್ಟು 25 ಅಕ್ಷರಗಳನ್ನು ವರ್ಗೀಯ ವ್ಯಂಜನಗಳೆನ್ನುವರು.

ಕ್ ಖ್ ಗ್ ಘ್ ಙ್ – (ಕಂಠ್ಯ ವ್ಯಂಜನಾಕ್ಷರಗಳು)
ಚ್ ಛ್ ಜ್ ಝ್ ಞ್– (ತಾಲವ್ಯ ವ್ಯಂಜನಾಕ್ಷರಗಳು) ದವಡೆ ಸಹಾಯದಿಂದ
ಟ್ ಠ್ ಡ್ ಢ್ ಣ್ – (ಮೂರ್ಧನ್ಯ ವ್ಯಂಜನಾಕ್ಷರಗಳು) ಮೂಗಿನ ಸಹಾಯದಿಂದ
ತ್ ಥ್ ದ್ ಧ್ ನ್ – ( ದಂತ್ಯ ವ್ಯಂಜನಾಕ್ಷರಗಳು) ಹಲ್ಲಿನ ಸಹಾಯ
ಪ್ ಫ್ ಬ್ ಭ್ ಮ್ – (ಓಷ್ಠ್ಯ ವ್ಯಂಜನಾಕ್ಷರಗಳು) ತುಟಿಯ ಸಹಾಯ

ವರ್ಗೀಯ ವ್ಯಂಜನದ ಮೊದಲ ಮತ್ತು ಮೂರನೇ ಅಕ್ಷರವನ್ನು 'ಅಲ್ಪಪ್ರಾಣ' ಮತ್ತು ಎರಡನೇ ಮತ್ತು ನಾಲ್ಕನೇ ಅಕ್ಷರಗಳನ್ನು 'ಮಹಾಪ್ರಾಣ' ಹಾಗೂ ಕೊನೆಯ ಅಕ್ಷರಗಳನ್ನು 'ಅನುನಾಸಿಕ' ಗಳೆಂತಲೂ ಕರೆಯುತ್ತಾರೆ.

**ಉದಾ: ಅಲ್ಪಪ್ರಾಣಗಳು** (10) – ಕ ಗ ಚ ಜ ಟ ಡ ತ ದ ಪ ಬ

**ಮಹಾಪ್ರಾಣಗಳು** (10) – ಖ ಘ ಛ ಝ ಠ ಢ ಥ ಧ ಫ ಭ

**ಅನುನಾಸಿಕಗಳು** (5) – ಙ ಞ ಣ ನ ಮ

ಅಲ್ಪಪ್ರಾಣಗಳು:– ಕಡಿಮೆ ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳನ್ನು ಅಲ್ಪಪ್ರಾಣಾಕ್ಷರಗಳೆನ್ನುವರು.
ಮಹಾಪ್ರಾಣಾಕ್ಷರಗಳು:– ದೀರ್ಘ ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳನ್ನು ಮಹಾಪ್ರಾಣಾಕ್ಷರಗಳೆನ್ನುವರು.
ಅನುನಾಸಿಕಗಳು:– ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ವ್ಯಂಜನಾಕ್ಷರಗಳನ್ನು ಅನುನಾಸಿಕಗಳೆನ್ನುವರು.

* ಕ ಚ ಟ ತ ಪ – 'ಅಘೋಷ್ಯ' ವ್ಯಂಜನಗಳು ಎನ್ನುವರು
* ಗ ಜ ಡ ದ ಬ – 'ಘೋಷ್ಯ' ವ್ಯಂಜನಗಳು ಎನ್ನುವರು.

ಎನ್ನ ನುಡಿ "ಟ ಠ ಡ ಢ ಣ" (ಮೂರ್ಧನ್ಯ) ಎಂದ ಕವಿ ಪಂಪ.

**2) ಅವರ್ಗೀಯ ವ್ಯಂಜನಗಳು – 9**

ವರ್ಗಗಳಾಗಿ ವಿಂಗಡಿಸಲು ಬಾರದ ವ್ಯಂಜನಗಳನ್ನು ಅವರ್ಗೀಯ ವ್ಯಂಜನಗಳೆನ್ನುವರು.
ಉದಾ: ಯ್, ರ್, ಲ್, ವ್, ಶ್, ಷ್, ಸ್, ಹ್, ಳ್ – 9

**III. ಯೋಗವಾಹಕಗಳು – 2**

'ಯೋಗ' ಎಂದರೆ ಸಂಬಂಧ
'ವಾಹ' ಎಂದರೆ ಹೊಂದಿದ ಎಂದರ್ಥ.
ಒಂದು ಅಕ್ಷರದ ಸಂಬಂಧ ಹೊಂದಿ ಉಚ್ಚರಿಸಲ್ಪಡುವ ಅಕ್ಷರಗಳೇ ಯೋಗವಾಹಕಗಳು. ಇವುಗಳಲ್ಲಿ 2 ವಿಧ

**1) ಅನುಸ್ವಾರ – 'ಂ' 'ಅಂ'**
**2) ವಿಸರ್ಗ – 'ಃ' 'ಅಃ'**

ಉದಾ: ಅಂ, ಗಂ, ಕಃ, ತಃ, ಎಂ

**'ಕೇಶೀರಾಜನ' ಪ್ರಕಾರ ಯೋಗವಾಹಗಳು 4 ಸಂಖ್ಯೆ ಇವೆ.**

1) ೱ – ಜಿಹ್ವಾಮೂಲಿಯ
2) ೲ – ಉಪಧ್ಮಾನಿಯ
3) ಂ – ಅನುಸ್ವಾರ
4) ಃ – ವಿಸರ್ಗ

**ಗುಣಿತಾಕ್ಷರಗಳು**

ಒಂದು ವ್ಯಂಜನಕ್ಕೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಗುಣಿತಾಕ್ಷರ ಎಂದು ಕರೆಯುತ್ತಾರೆ.

**ಉದಾ:** ಕ್ + ಅ = ಕ
ಕ್ + ಆ = ಕಾ
ಚ್ + ಈ = ಚೀ
ಗ್ + ಆ = ಗಾ
ಯ್ + ಉ = ಯು ಇತ್ಯಾದಿ

downloaded from: www.kpscvaani.com


**ಸಂಯುಕ್ತಾಕ್ಷರಗಳು ಅಥವಾ ಒತ್ತಕ್ಷರಗಳು**

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರಗಳನ್ನು ಸಂಯುಕ್ತಾಕ್ಷರಗಳು ಅಥವಾ ಒತ್ತಕ್ಷರಗಳು ಎನ್ನುವರು.

**ಇದರಲ್ಲಿ 2 ವಿಧ.**

**1) ಸಜಾತಿಯ ಸಂಯುಕ್ತಕ್ಷರಗಳು**

ಒಂದೇ ಜಾತಿಯ ಎರಡು ವ್ಯಂಜನಗಳು ಸೇರಿ ಆಗುವ ಸಂಯುಕ್ತಾಕ್ಷರಗಳು.

**ಉದಾ:** ಅಪ್ಪ, ಅಜ್ಜಿ, ಅಕ್ಕ, ಅಮ್ಮ, ಮಣ್ಣು, ಉತ್ತಮ, ಕಜ್ಜ, ಇತ್ಯಾದಿ.

**2) ವಿಜಾತೀಯ ಸಂಯುಕ್ತಾಕ್ಷರಗಳು**

ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಸೇರಿ ಆಗುವ ಸಂಯುಕ್ತಾಕ್ಷರಗಳು.

ಉದಾ: ಉಷ್ಣ, ತಕ್ಷಣ, ಅಸ್ತ್ರ, ಅಕ್ಷರ, ರಾಷ್ಟ್ರೀಯ, ಇತ್ಯಾದಿ.

## 2. ನಾಮಪದಗಳು

ಒಂದು ವ್ಯಕ್ತಿಯ, ಒಂದು ಸ್ಥಳದ, ಒಂದು ವಸ್ತುವಿನ ಹೆಸರನ್ನು ಸೂಚಿಸುವ ಶಬ್ದಗಳನ್ನು "ನಾಮಪದಗಳು" ಎನ್ನವರು.

ನಾಮ ಪದದ ಮೂಲ ರೂಪವನ್ನು 'ನಾಮಪ್ರಕೃತಿ' ಎಂದು ಕರೆಯುತ್ತಾರೆ. ನಾಮ ಪ್ರಕೃತಿಯೇ ನಾಮಲಿಂಗ.

ನಾಮ ಪ್ರಕೃತಿಯಲ್ಲಿ 2 ವಿಧ

**1) ಸಹಜನಾಮ ಪ್ರಕೃತಿ**

ಉದಾ: ರಾಮ, ಹುಡುಗ, ನದಿ, ಅರಮನೆ, ಮರ, ಮಳೆ

**2) ಸಾದಿತನಾಮ ಪ್ರಕೃತಿ**

ಉದಾ: ಒಕ್ಕಣ್ಣ, ಹೆಬ್ಬಾಗಿಲು, ದೊಡ್ಡಮರ, ಚಳಿಗಾಲ, ಮಳೆಗಾಲ, ಇತ್ಯಾದಿ.

ನಾಮಪದದ ಪ್ರಕಾರಗಳು/ನಾಮವಾಚಕಗಳು '8' ಬಗೆ ಇವೆ.

1) ವಸ್ತುವಾಚಕಗಳು
2) ಗುಣವಾಚಕಗಳು
3) ಸಂಖ್ಯಾವಾಚಕಗಳು
4) ಸಂಖ್ಯೇಯ ವಾಚಕಗಳು
5) ಭಾವನಾಮಗಳು
6) ಪರಿಮಾಣ ವಾಚಕಗಳು
7) ಪ್ರಕಾರ ವಾಚಕಗಳು
8) ದಿಗ್ವಾಚಕಗಳು

**I. ವಸ್ತುವಾಚಕಗಳು**

'ಚೇತನ' ರೂಪವಾದಂತಹ (ಜೀವ ಇರುವ) ಪ್ರಾಣಿಗಳು, ಮನುಷ್ಯ, ಮುದುಕ, ಎತ್ತು, ನಾಯಿ, ಹೆಂಗಸು ಹಾಗೂ 'ಅಚೇತನ' ರೂಪವಾದಂತಹ (ಜೀವ ಇಲ್ಲದ) ಸ್ಥಳ, ಮರ, ಜಲ, ಕಲ್ಲು, ಹಣ್ಣು, ಇತ್ಯಾದಿ. ಪದಗಳ ಹೆಸರನ್ನು ತಿಳಿಸುವ ಶಬ್ದಗಳಿಗೆ ವಸ್ತುವಾಚಕ ಎಂದು ಕರೆಯುತ್ತಾರೆ.

**ವಸ್ತುವಾಚಕದಲ್ಲಿ 3 ವಿಧ**

**1) ರೂಢನಾಮ**
**2) ಅಂಕಿತನಾಮ**
**3) ಅನ್ವರ್ಥನಾಮ**

**1) ರೂಢನಾಮ**

ರೂಢಿಯಲ್ಲಿ ಬಂದ ಸಾಮಾನ್ಯ ವಾಚಕಗಳೇ ರೂಢನಾಮ.

ಉದಾ: ನದಿ, ಪರ್ವತ, ಊರು, ಮನುಷ್ಯ, ದೇಶ, ಹುಡುಗ, ಇತ್ಯಾದಿ.

**2) ಅಂಕಿತನಾಮ**

ವ್ಯವಹಾರದ ಉಪಯೋಗಕ್ಕೆ ನಾವು ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳು.

ಉದಾ: ರಾಮ, ಕೃಷ್ಣಾ, ರಾಹುಲ, ಮಾಲಾ, ಗಂಗಾ, ಮೋಹನ, ಹಿಮಾಲಯ ಪರ್ವತ, ಇತ್ಯಾದಿ.

**3) ಅನ್ವರ್ಥನಾಮ**

ಅರ್ಥಕ್ಕೆ ಅನ್ವರ್ಥವಾಗಿ ಇಟ್ಟ ಹೆಸರುಗಳೇ ಅನ್ವರ್ಥನಾಮ.

ಉದಾ: ಕುಂಟ, ಕಿವುಡ, ಮೂಗ, ವ್ಯಾಪಾರಿ, ವಿದ್ವಾಂಸ, ವಿಜ್ಞಾನಿ, ವ್ಯಾಪಾರಿ, ಪೂಜಾರಿ, ಇತ್ಯಾದಿ.

**II. ಗುಣವಾಚಕಗಳು**

ವಸ್ತುಗಳು ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳನ್ನು ಗುಣವಾಚಕಗಳು ಎನ್ನುವರು.

ಉದಾ: ದೊಡ್ಡದು, ಚಿಕ್ಕದು, ಒಳ್ಳೆಯ, ಕೆಟ್ಟ, ಹಳತು, ಬಿಳಿಯ, ಎಳೆಯದು, ಹಿರಿಯದು, ಇತ್ಯಾದಿ.

**III. ಸಂಖ್ಯಾ ವಾಚಕಗಳು**

ಸಂಖ್ಯೆಯನ್ನು ವಾಚಿಸುವ ಶಬ್ದಗಳೇ ಸಂಖ್ಯಾ ವಾಚಕಗಳು.

ಉದಾ: ಒಂದು, ಎರಡು, ಹತ್ತು, ನೂರು, ಹನ್ನೆರಡು

downloaded from: www.kpscvaani.com


(1–999) ಪದಗಳು ಅಚ್ಚ ಕನ್ನಡ ಪದಗಳು, ಉಳಿದವೆಲ್ಲಾ ಲಕ್ಷ, ಕೋಟಿ, ಸಾವಿರ ಇವೆಲ್ಲಾ ಸಂಸ್ಕೃತ ಪದಗಳು.

**IV. ಸಂಖ್ಯೇಯ ವಾಚಕಗಳು**

ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಸಂಖ್ಯೇಯ ವಾಚಕಗಳು ಎನ್ನುವರು.

ಉದಾ: ಮೂವರು, ನಾಲ್ವರು, ಇಮ್ಮಡಿ, ನೂರ್ಮಡಿ ಇತ್ಯಾದಿ.




**V. ಭಾವನಾಮಗಳು**

ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೇ ಭಾವನಾಮಗಳು.

ಉದಾ: ಬಿಳಿಯದರ ಭಾವ – ಬಿಳುಪು

ಕರಿಯದರ ಭಾವ – ಕಪ್ಪು

ಹಿರಿಯದರ ಭಾವ – ಹಿರಿಮೆ

ನೋಡುವುದರ ಭಾವ – ನೋಟ

ಕೂಡುವುದರ ಭಾವ – ಕೂಟ ಇತ್ಯಾದಿ

**VI. ಪರಿಮಾಣ ವಾಚಕಗಳು**

ವಸ್ತುಗಳ ಸಾಮಾನ್ಯ ಅಳತೆ ಪರಿಮಾಣ ಅಥವಾ ಗಾತ್ರ ಮೊದಲಾದವುಗಳನ್ನು ಹೇಳುವ ಶಬ್ದಗಳೇ ಪರಿಮಾಣ ವಾಚಕ.

ಉದಾ: ಅಷ್ಟು, ಇಷ್ಟು, ಕೆಲವು, ಎಷ್ಟು, ಹಲವು ಇತ್ಯಾದಿ.

**VII. ಪ್ರಕಾರ ವಾಚಕಗಳು**

ವಸ್ತುಗಳ ಸ್ಥಿತಿ ಅಥವಾ ರೀತಿಗಳಲ್ಲಿ ತಿಳಿಸುವ ಶಬ್ದಗಳೇ ಪ್ರಕಾರ ವಾಚಕಗಳು. ಇವು ಸಹ ಒಂದು ಬಗೆಯ ಗುಣವಾಚಕಗಳಂತೆಯೇ ಇರುತ್ತದೆ.

ಉದಾ: ಅಂತಹ, ಇಂತಹ, ಅಂತಹದ್ದು, ಎಂತಹದ್ದು ಇತ್ಯಾದಿ

**VIII. ದಿಗ್ವಾಚಕಗಳು**

ದಿಕ್ಕುಗಳ ಹೆಸರನ್ನು ಸೂಚಿಸುವ ಹೆಸರನ್ನು ದಿಗ್ವಾಚಕಗಳು ಎನ್ನುವರು.

ಉದಾ: ಮೂಡಣ, ಪಡುವಣ, ತೆಂಕಣ, ಬಡಗಣ ಇತ್ಯಾದಿ.

## 3. ಸರ್ವನಾಮ

ವಸ್ತುವಾಚಕಗಳಾದ ನಾಮಪದಗಳ ಸ್ಥಾನದಲ್ಲಿ ಪರ್ಯಾಯವಾಗಿ ಬಳಕೆಯಾಗುವ ಶಬ್ದಗಳೇ ಸರ್ವನಾಮ.

ಉದಾ: ಅವನು, ಅವಳು, ಇವನು, ಅದು, ಇದು, ಇವಳು, ಇವನು, ಇತ್ಯಾದಿ.

**ಸರ್ವನಾಮದಲ್ಲಿ 3 ಬಗೆ**

**1) ಪುರುಷಾರ್ಥಕ ಸರ್ವನಾಮಗಳು**

**2) ಪ್ರಶ್ನಾರ್ಥಕ ಸರ್ವನಾಮಗಳು**

**3) ಆತ್ಮಾರ್ಥಕ ಸರ್ವನಾಂಗಳು**

**1) ಪುರುಷಾರ್ಥಕ ಸರ್ವನಾಮಗಳು**

**ಉದಾ:** ಉತ್ತಮ ಪುರುಷ – ನಾನು/ನಾವು

ಮಧ್ಯಮ ಪುರುಷ – ನೀನು/ ನೀವು

ಪ್ರಥಮ ಪುರುಷ – ಅವನು/ಅವಳು/ಅದು

**2) ಪ್ರಶ್ನಾರ್ಥಕ ಸರ್ವನಾಮಗಳು**

ಉದಾ: ಏನು, ಯಾವುದು, ಯಾತರದ್ದು, ಎಲ್ಲಿ, ಯಾರು ಇತ್ಯಾದಿ ಇವು ಪ್ರಶ್ನೆಗಳನ್ನು ಕೇಳಲು ಬಳಸಲ್ಪಡುತ್ತವೆ.

**3) ಆಥ್ಮಾರ್ಥಕ ಸರ್ವನಾಮಗಳು**

ಉದಾ: ತಾನು ಮತ್ತು ತಾವು, ತನ್ನ, ತಮ್ಮ, ಎಂಬ ರೂಪಗಳನ್ನು ಆತ್ಮಾರ್ಥಕ ಸರ್ವನಾಮಗಳೆನಿಸಿವೆ.

downloaded from: www.kpscvaani.com


## 4. ಲಿಂಗಗಳು

ಯಾವ ಶಬ್ದ ಪ್ರಯೋಗವು ಗಂಡಸು ಅಥವಾ ಹೆಂಗಸು ಅವೆರಡೂ ಅಲ್ಲದ ನಪುಂಸಕ ಎಂಬ ಅರ್ಥವನ್ನು ಕೊಡುತ್ತದೆಯೋ ಅವುಗಳನ್ನು ಲಿಂಗಗಳು ಎಂದು ಗುರುತಿಸಲಾಗುತ್ತದೆ.

**ಲಿಂಗಗಳ ವಿಧಗಳು**

**1) ಪುಲ್ಲಿಂಗ**

**2) ಸ್ತ್ರೀಲಿಂಗ**

**3) ನಪುಂಸಕಲಿಂಗ**

ಎ) ಪುಂ ಸ್ತ್ರೀಲಿಂಗ

ಬಿ) ಪುಂ ನಪುಂಸಕಲಿಂಗ

ಸಿ) ಸ್ತ್ರೀ–ನಪುಂಸಕಲಿಂಗ

ಡಿ) ನಿತ್ಯ ನಪುಂಸಕಲಿಂಗ

**1) ಪುಲ್ಲಿಂಗ:–**

ಯಾವ ಶಬ್ದವು 'ಗಂಡಸು' ಎಂಬ ಅರ್ಥವನ್ನು ಕೊಡುವುದೋ ಅದು ಪುಲ್ಲಿಂಗ.

ಉದಾ: ತಂದೆ, ಮುದುಕ, ಶಕ್ತಿವಂತ, ಸೋದರ, ತಮ್ಮ, ರಾಮ, ಕೃಷ್ಣ, ಅವನು, ಶಿಕ್ಷಕ ಇತ್ಯಾದಿ.

**2) ಸ್ತ್ರೀಲಿಂಗ:–**

ಯಾವ ಶಬ್ದವು 'ಹೆಂಗಸು' ಎಂಬ ಅರ್ಥ ಕೊಡುವುದೋ ಅದು ಸ್ತ್ರೀಲಿಂಗ.

ಉದಾ: ತಾಯಿ, ಮುದುಕಿ, ಸೋದರಿ, ರಾಣಿ, ಕೆಟ್ಟವಳು, ಸೀತೆ, ರಾಧೆ, ಅವಳು, ಶಿಕ್ಷಕಿ, ರಾಜಕುಮಾರಿ ಇತ್ಯಾದಿ.

**3) ನಪುಂಸಕಲಿಂಗ:–**

ಮನುಷ್ಯರನ್ನು ಬಿಟ್ಟು ಪ್ರಾಣಿ, ಪಕ್ಷಿ, ನಿರ್ಜೀವ ವಸ್ತುಗಳು ನಪುಂಸಕಲಿಂಗ ಎನಿಸುತ್ತವೆ.

ಉದಾ: ಮನೆ, ಕಲ್ಲು, ಕುರ್ಚಿ, ಪುಸ್ತಕ, ಹಸು, ವಿದ್ಯಾರ್ಥಿ, ಮೋಡ, ಬಂಗಾರ, ಸಮುದ್ರ, ಕಾಗೆ, ಕೋಗಿಲೆ ಇತ್ಯಾದಿ.

ಕೇಶೀರಾಜನು "ಲಿಂಗಮೊಂಬತ್ತು ತೆರಂ" ಎಂದು ಹೇಳಿದ್ದಾನೆ. ಈತನ ಪ್ರಕಾರ ಲಿಂಗಗಳು 9 ತರಹಗಳಿವೆ. ಕೇಶೀರಾಜನು 9 ಲಿಂಗಗಳನ್ನು ಹೇಳುತ್ತಾನಾದರೂ ಆಧುನಿಕ ಭಾಷಾ ವಿಜ್ಞಾನಿಗಳು ಅವುಗಳಲ್ಲಿ ಎಲ್ಲವನ್ನು ಒಪ್ಪಿಕೊಂಡಿಲ್ಲ ಆದರೆ ಕೆಲವನ್ನು ವಿಶೇಷವಾಗಿ ಗುರ್ತಿಸಲಾಗಿದೆ. ಅವುಗಳೆಂದರೆ,

**ಎ) ಪುಂಸ್ತ್ರೀಲಿಂಗ**

ಇಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಎರಡರ ಅರ್ಥವನ್ನು ಹೊಂದಿರುತ್ತವೆ.

ಉದಾ: ಅವರು, ಇವರು, ಎಲ್ಲರೂ, ಮಕ್ಕಳು, ದೊಡ್ಡವರು, ಕೇಳದವರು, ಮಾಡಿದವರು

**ಬಿ) ಪುನ್ನಪುಂಸಕಲಿಂಗ**

ಈ ಪದಗಳು ಪುಲ್ಲಿಂಗ ಮತ್ತು ನಪುಂಸಕಲಿಂಗ ಎರಡರ ಅರ್ಥವನ್ನು ಕೊಡುತ್ತವೆ.

ಉದಾ: ಶನಿಯು ಕಾಡುತ್ತಾನೆ (ಪುಲ್ಲಿಂಗ)
ಶನಿಯು ಕಾಡುತ್ತದೆ (ಪುನಪುಂಸಕಲಿಂಗ)
ಚಂದ್ರ ಉದಯಿಸಿದನು (ಪುಲ್ಲಿಂಗ)
ಚಂದ್ರ ಉದಯಿಸಿತು (ಪುನಪುಂಸಕಲಿಂಗ)

**ಸಿ) ಸ್ತ್ರೀ–ನಪುಂಸಕ ಲಿಂಗಗಳು**

ಈ ಪದಗಳು ಸ್ತ್ರೀಲಿಂಗ ಮತ್ತು ನಪುಂಸಕಲಿಂಗ ಎರಡರ ಅರ್ಥವನ್ನು ಹೊಂದಿರುತ್ತವೆ.

ಉದಾ: ಲಕ್ಷ್ಮೀ ಒಲಿದಳು (ಸ್ತ್ರೀಲಿಂಗ)
ಲಕ್ಷ್ಮೀ ಒಲಿಯಿತು (ಸ್ತ್ರೀ ನಪುಂಸಕ)
ಹುಡುಗಿ ಒಲಿದಳು (ಸ್ತ್ರೀಲಿಂಗ)
ಹುಡುಗಿ ಒಲಿಯಿತು (ಸ್ತ್ರೀನಪುಂಸಕ)
ಸರಸ್ವತಿ ಕೃಪೆ ಮಾಡಿದಳು (ಸ್ತ್ರೀಲಿಂಗ)
ಸರಸ್ವತಿ ಕೃಪೆ ಮಾಡಿತು (ಸ್ತ್ರೀನಪುಂಸಕ)

**ಡಿ) ನಿತ್ಯ ನಪುಂಸಕಗಳು**

ಈ ಪದಗಳು ಎಲ್ಲ ಸಂದರ್ಭದಲ್ಲಯೂ ನಪುಂಸಕಲಿಂಗವನ್ನೇ ಸೂಚಿಸುತ್ತವೆ.

ಉದಾ: ಶಿಶು, ಮಗು, ಮರಿ, ಕರು, ಕೂಸು, ಎತ್ತು, ಹಸು ಇತ್ಯಾದಿ

JNANAGANGOTHRI
Inspiring to serve...

downloaded from: www.kpscvaani.com


# ಪೊಲೀಸ್ ಸಬ್‌ಇನ್ಸ್ಪೆಕ್ಟರ್ ನೇಮಕಾತಿ–2018

ವಿವರಗಳು

* ತರಗತಿಗಳು 24/1/18 ರಿಂದ ಪ್ರಾರಂಭ
* ತರಗತಿಗಳು ಪತ್ರಿಕೆ–1, ಪತ್ರಿಕೆ–2, ದೈಹಿಕ ಶಿಕ್ಷಣ ಮತ್ತು ಅಣುಕು ಪರೀಕ್ಷೆಗಳನ್ನು ಒಳಗೊಂಡಿರುತ್ತದೆ.
* ಪತ್ರಿಕೆ–1 ವಿಷಯ ತಜ್ಞರಾದ ಶ್ರೀಮತಿ ಗಾಯಿತ್ರಿರವರು ಬೋಧಿಸಲಿದ್ದಾರೆ
* ಪತ್ರಿಕೆ–1ನ್ನು ಪರೀಕ್ಷೆಗಾಗಿಯೇ ತಯಾರಿಸಿರುವ PRACTICAL WORK BOOK ನ ಸಹಾಯದೊಂದಿಗೆ ನಡೆಸಲಾಗುತ್ತದೆ. ಇದರಲ್ಲಿ 40 ಪ್ರಬಂಧ ಬರವಣಿಗೆ, 40 ಭಾಷಾಂತರ ಮತ್ತು 40 ಸಂಕ್ಷಿಪ್ತ ಬರವಣಿಗೆಯನ್ನು ಕಲಿಸಲಾಗುತ್ತದೆ.
* ಪತ್ರಿಕೆ–2ನ್ನು ವಿವಿಧ ವಿಷಯ ತಜ್ಞರಿಂದ ಬೋಧನಾ ಸಲಕರಣೆಗಳೊಂದಿಗೆ ನಡೆಸಲಾಗುತ್ತದೆ.
* ಪರೀಕ್ಷಾ ಶ್ರೇಣಿಯು (Online/ Offline) 20 ಪರೀಕ್ಷೆಗಳನ್ನು ಒಳಗೊಂಡಿದ್ದು ಚರ್ಚೆ ಮತ್ತು ವಿವರಣಾತ್ಮಕ ಉತ್ತರಗಳೊಂದಿಗೆ ನಡೆಸಲಾಗುತ್ತದೆ.
* ದೈಹಿಕ ತರಬೇತಿಯನ್ನು ರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳ ತರಬೇತಿದಾರರ ಸಹಾಯದಿಂದ ಕಂಠೀರವ ಕ್ರೀಡಾಂಗಣದಲ್ಲಿ ನಡೆಸಲಾಗುತ್ತದೆ.
* ತರಗತಿಗಳನ್ನು ವಿವಿಧ ಬ್ಯಾಚ್ ಸಮಯಗಳಲ್ಲಿ ನಡೆಸಲಾಗುತ್ತದೆ.

KARNATAKA STATE POLICE

ಕರ್ನಾಟಕ ರಾಜ್ಯ ಪೊಲೀಸ್

JNANAGANGOTHRI

CELEBRATING 10 YEARS

Ph 99163-99276

ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ,
ವಿಜಯನಗರ, ಬೆಂಗಳೂರು

ಅಧಿಸೂಚನೆ ಅತೀ ಶೀಘ್ರದಲ್ಲಿ ಹೊರಬೀಳಲಿದೆ

## ಕೆ.ಎ.ಎಸ್–2018 ತರಗತಿಗಳು ಫೆಬ್ರವರಿ 25 ರಿಂದ ಪ್ರಾರಂಭ

## ಮತ್ತು

## ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ

## ಆಫ್ಲೈನ್ ಮತ್ತು ಆನ್‌ಲೈನ್‌ಗಳಲ್ಲಿ

## ಅಣಕು ಪರೀಕ್ಷೆಗಳು

## ಫೆಬ್ರವರಿ – 25 ರಿಂದ ಪ್ರಾರಂಭ

## ಕೂಡಲೆ ಸಂಪರ್ಕಿಸಿ:99163–99276

downloaded from: www.kpscvaani.com


## 5. ವಚನ

**ವಚನ ಎಂದರೆ ಸಂಖ್ಯೆ ಎಂದರ್ಥ.**

**ಕನ್ನಡದ ವಚನಗಳಲ್ಲಿ 2 ಬಗೆ**

**1) ಏಕವಚನ**

**2) ಬಹುವಚನ**

**1) ಏಕವಚನ:–**

ಯಾವುದೇ ಶಬ್ದವು ಒಂದು ವಸ್ತುವನ್ನು ಒಬ್ಬ ವ್ಯಕ್ತಿಯನ್ನು, ಒಂದು ಸ್ಥಳವನ್ನು, ಒಂದು ಸಂಗತಿಯನ್ನು ಕುರಿತು ಹೇಳುವುದೇ ಏಕ ವಚನ.

ಉದಾ: ಅವನು, ಅವಳು, ಅರಸ, ಸ್ತ್ರೀ, ಅಣ್ಣ ಇತ್ಯಾದಿ

**2) ಬಹುವಚನ:–**

ಒದಕ್ಕಿಂತ ಹೆಚ್ಚು ವಸ್ತುಗಳನ್ನು ಸೂಚಿಸುವುದೇ ಬಹುವಚನ.

ಉದಾ: ಅವರು, ಅವುಗಳು, ಅವುಗಳೆಲ್ಲ

ಈ ವಚನ ಪ್ರತ್ಯೇಯಗಳು ನಾಮಪ್ರಕೃತಿ ಮತ್ತು ವಿಭಕ್ತಿ ಪ್ರತ್ಯೇಯದ ಮಧ್ಯೆ ಪ್ರಯೋಗವಾಗುತ್ತವೆ.

ಉದಾ:

| ಏಕವಚನ | ಬಹುವಚನ |
|---|---|
| ಅರಸ | ಅರಸರು |
| ಮರ | ಮರಗಳು |
| ಸ್ತ್ರೀ | ಸ್ತ್ರೀಯರು |
| ಅಣ್ಣ | ಅಣ್ಣಂದಿರು |
| ಮಗು | ಮಕ್ಕಳು |

ಬಹುವಚನದಲ್ಲಿ ಅರು, ಗಳು, ಅಂದಿರು, ಕಳು, ಅವು, ಮೊದಲಾದ ಪ್ರತ್ಯೇಯಗಳು ಬರುತ್ತವೆ.

ಒಬ್ಬನೇ ವ್ಯಕ್ತಿ ಇದ್ದರೂ ಗೌರವ ಸೂಚಿಸುವ ಸಂದರ್ಭದಲ್ಲಿ ವ್ಯಂಗ್ಯವಾಗಿ ಅಣಕಿಸುವ ಸಂದರ್ಭದಲ್ಲಿ ಬಹುವಚನ ಪ್ರತ್ಯೇಯ ಬಳಸುವುದುಂಟು.

ಉದಾ: ನಮ್ಮ ತಾಯಿ, ನಿಮ್ಮ ಗುರುಗಳು ಈ ಪದಗಳಲ್ಲಿ ನಮ್ಮ, ನಿಮ್ಮ ಎಂಬುವುವು ಬಹುವಚನ ರೂಪಗಳಾಗಿವೆ.

ವ್ಯಂಗ್ಯೋಕ್ತಿಗೆ

ಉದಾ: ಮಹಾಪ್ರಭುಗಳೇ ಬನ್ನಿ
ಓಹೋ, ಬಂದಿರೋ
ಹೇಳಿ, ಮಹಾಸ್ವಾಮಿಗಳೇ ಇತ್ಯಾದಿ

ಕನ್ನಡದಲ್ಲಿ ಏಕವಚನ ಮತ್ತು ಬಹುವಚನಗೆಂದು ಎರಡು ವಿಧಗಳಿದ್ದರೂ ಕೇಶೀರಾಜನು ದ್ವಿ–ವಚನ ಎಂಬ ಮತ್ತೊಂದುವಚನವನ್ನು ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ ಮತ್ತು ಪ್ರಯೋಗಗಳನ್ನು ದ್ವಿ ವಚನ ಎನ್ನುತ್ತಿದ್ದ ಸಂಸ್ಕೃತ ವ್ಯಾಕರಣ ಪರಂಪರೆಯ ಪ್ರಭಾವ ಈತನ ಮೇಲಾಗಿದೆ.

## 6. ವಿಭಕ್ತಿ ಪ್ರತ್ಯಯಗಳು

ನಾಮ ಪ್ರಕೃತಿಗಳ ಜೊತೆ ಸೇರಿ ಪದದ ಅರ್ಥವನ್ನು ಆಯಾಯ ಸಂದರ್ಭಗಳಿಗನುಗುಣವಾಗಿ ಬದಲಾವಣೆ ಮಾಡುವ ಪ್ರತ್ಯಯಗಳಿಗೆ ನಾಮ ವಿಭಕ್ತಿ ಪ್ರತ್ಯಯಗಳೆಂದು ಕರೆಯಲಾಗಿದೆ. ಒಂದು ವಾಕ್ಯದಲ್ಲಿ ಬರುವ ಒಂದು

ನಾಮಪದಕ್ಕೂ ಇನ್ನಿತರ ಪದಗಳಿಗೂ ಇರುವ ಸಂಬಂಧವನ್ನು ತಿಳಿಸುತ್ತವೆ. ಕ್ರಿಯಾಪದಕ್ಕೂ ವಾಕ್ಯದ ಇತರ ನಾಮಪದಗಳಿಗೂ ಸಂಬಂಧವನ್ನು ಕಲ್ಪಿಸುವ ನಾನಾ ಪ್ರಕಾರದ ವಿಭಕ್ತಿಗಳು ಸೂಚಿಸುವ ಅರ್ಥಕ್ಕೆ ಕಾರಕಾರ್ಥವೆನ್ನುವರು.

ನಾಮ ವಿಭಕ್ತಿಪ್ರತ್ಯಯಗಳಲ್ಲಿ ಒಟ್ಟು 8 ವಿಧಗಳು

| ವಿಭಕ್ತಿಗಳು | ಕಾರಕಾರ್ಥಗಳು | ಹೊಸಗನ್ನಡ ವಿಭಕ್ತಿ ಪ್ರತ್ಯಯ | ಹೊಸಗನ್ನಡ ಪ್ರಯೋಗ | ಹಳಗನ್ನಡ ವಿಭಕ್ತಿ ಪ್ರತ್ಯಯ | ಹಳಗನ್ನಡ ಪ್ರಯೋಗ |
|---|---|---|---|---|---|
| ಪ್ರಥಮಾ | ಕರ್ತ್ರರ್ಥ | ಉ | ರಾಮನು | ಮ್ | ರಾಮನ್ |
| ದ್ವಿತೀಯಾ | ಕರ್ಮಾರ್ಥ | ಅನ್ನು | ರಾಮನನ್ನು | ಅಂ | ರಾಮನಂ |
| ತೃತೀಯ | ಕರಣಾರ್ಥ | ಇಂದ | ರಾಮನಿಂದ | ಇಂ/ಇಂದಂ | ರಾಮನಿಂದಂ |
| ಚತುರ್ಥಿ | ಸಂಪ್ರದಾನ | ಗೆ/ಕೆ | ರಾಮನಿಗೆ | ಗೆ/ಕೆ/ಕ್ಕೆ | ರಾಮಂಗೆ |

downloaded from: www.kpscvaani.com



| | | | | | |
|---|---|---|---|---|---|
| ಪಂಚಮಿ | ಅಪಾದಾನ | ದೆಸೆಯಿಂದ | ರಾಮನ ದೆಸೆಯಿಂದ | ಅತ್ತಣಿಂ/ಅತ್ತಣಿಂದಂ | ರಾಮನತ್ತಣಿಂ/ರಾಮನತ್ತಣ್ಣಿಂದೆ |
| ಷಷ್ಠೀ | ಸಂಬಂಧ | ಅ | ರಾಮನ | ಅ | ರಾಮನ |
| ಸಪ್ತಮೀ | ಅಧಿಕರಣ | ಅಲ್ಲಿ/ಇಲ್ಲಿ | ರಾಮನಲ್ಲಿ | ಒಳ್/ಎ | ರಾಮನೊಳ್/ರಾಮನೊಳು |
| ಸಂಬೋಧನಾ | ಅಭಿಮುಖೀಕರಣ | ಆ, ಎ, ಇರಾ, ಈ | ರಾಮ, ರಾಮನೇ | ಆ, ಏ, ಇರಾ | ರಾಮಾ, ರಾಮನೇ |

ಆಧುನಿಕರ ಪ್ರಕಾರ ತೃತೀಯ ವಿಭಕ್ತಿಯೇ ಪಂಚಮಿ ವಿಭಕ್ತಿಯ ಕೆಲಸವನ್ನು ಮಾಡುವುದರಿಂದ ಪಂಚಮಿ ವಿಭಕ್ತಿ (ದೆಸೆಯಿಂದ) ಎಂಬ ರೂಪವೂ ಬೇಕಾಗಿಲ್ಲ ಎಂಬುದು ಆಧುನಿಕರ ವಾದ. ಆದರೇ ಸಾಂಪ್ರದಾಯಿಕ ವ್ಯಾಕರಣ ತಜ್ಞರು ಇದನ್ನು ಒಪ್ಪುವುದಿಲ್ಲ. ಇದೇ ರೀತಿ ಆಧುನಿಕರ ಪ್ರಕಾರ ಸಂಭೋಧನಾ ವಿಭಕ್ತಿಯು ಒಂಸು ವಿಭಕ್ತಿ ಪ್ರತ್ಯೇಯ ಅಲ್ಲ.




## 7. ಕ್ರಿಯಾಪದ

**ಪೂರ್ಣಗೊಂಡ ಒಂದು ಕ್ರಿಯೆಯ ಅರ್ಥವನ್ನು ಕೊಡುವ ಪದವನ್ನು ಕ್ರಿಯಾಪದ ಎನ್ನುವರು.**

**ಧಾತು**

ಕ್ರಿಯಾಪದದ ಮೂಲರೂಪವನ್ನು ಧಾತು ಅಥವಾ ಕ್ರಿಯಾ ಪ್ರಕೃತಿ ಎನ್ನುವರು. ಧಾತುವಿಗೆ ಪ್ರತ್ಯಯವು ಸೇರಿ ಆಗುವ ಪದವೇ ಕ್ರಿಯಾಪದ.

**ಉದಾ:** ಅವನು 'ಹೋಗು'ತ್ತಾನೆ.

ಇಲ್ಲಿ 'ಹೋಗು' ಎಂಬುದು ಧಾತು.

ಕ್ರಿಯಾಪದವು ಕರ್ತೃವಿನ ಕ್ರಿಯೆಯನ್ನು ಹೇಳುತ್ತದೆ. (ಕರ್ತೃ ಎಂದರೆ ವಾಕ್ಯದಲ್ಲಿನ ಕ್ರಿಯೆಯನ್ನು ಮಾಡುವವರು)

**ಧಾತುಗಳಲ್ಲಿ ಎರಡು ಪ್ರಕಾರಗಳು**

**1) ಮೂಲಧಾತು**

**2) ಸಾಧಿತಧಾತು**

**ಮೂಲಧಾತು:–** ಇವು ಅಸ್ಥಿತ್ವ ಹೊಂದಿರುವ ಧಾತುಗಳು.

**ಉದಾ:** ಹೋಗು, ಓಡು, ತಿನ್ನು, ನಿಲ್ಲು, ನಡೆ ಇತ್ಯಾದಿ.

**ಸಾಧಿತಧಾತು:–** ಕೆಲವು ಸಂದರ್ಭಗಳಲ್ಲಿ 'ಇಸು' ಪ್ರತ್ಯಯವನ್ನು ಸೇರಿಸಿ ಆಗುವ ಧಾತುಗಳು ಸಾಧತಧಾತು.

ಉದಾ: ಪ್ರೀತಿಸು, ಸೇರಿಸು, ಶೋಕಿಸು, ಪ್ರಯತ್ನಿಸು, ಚಡಪಡಿಸು, ಧಗಧಗಿಸು, ಆಡಿಸು, ನುಡಿಸು ಇತ್ಯಾದಿ.

ಉಪಯೋಗದ ದೃಷ್ಟಿಯಿಂದ ಧಾತುಗಳನ್ನು ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ.

**1) ಸಕರ್ಮಕ ಧಾತು**

**2) ಅಕರ್ಮಕ ಧಾತು**

**1) ಸಕರ್ಮಕ ಧಾತು**

ತಮ್ಮ ಅರ್ಥಪೂರ್ಣತೆಯನ್ನು ಕರ್ಮಪದವನ್ನು ಅಪೇಕ್ಷಿಸುವ ಧಾತುಗಳು.

**ಉದಾ: ಮಾಡು, ತಿನ್ನು, ಕೊಡು, ಓದು ಇತ್ಯಾದಿ**

**ಮಮತಳು ಕೆಲಸವನ್ನು ಮಾಡಿದಳು.**

ಇಲ್ಲಿ 'ಮಾಡು' ಎಂಬ ಧಾತು ತನ್ನ ಅರ್ಥಪೂರ್ಣತೆಗೆ 'ಕೆಲಸ' ಎಂಬ ಕರ್ಮಪದವನ್ನು ಅಪೇಕ್ಷಿಸಿದೆ. ಸಕರ್ಮಕ ಧಾತು ಎಂದರೆ, ಏನನ್ನು, ಯಾರನ್ನು ಎಂದು ಪ್ರಶ್ನೆ ಮಾಡಿದಾಗ ಕ್ರಿಯೆಯ ಉತ್ತರ ದೊರಕುವಂತದ್ದು.

**ಉದಾ:** ಮಮತಳು 'ಏನನ್ನು' ಮಾಡಿದಳು? ಈ ಪ್ರಶ್ನೆಗೆ ಉತ್ತರ 'ಕೆಲಸವನ್ನು'.

**2) ಅಕರ್ಮಕ ಧಾತು**

ಈ ಧಾತುಗಳಿಗೆ ಏನನ್ನು, ಯಾರನ್ನು ಎಂಬ ಪ್ರಶ್ನೆ ಮಾಡಿದರೆ ಕ್ರಿಯೆಯ ಉತ್ತರ ದೊರಕುವುದಿಲ್ಲ. ಅಂದರೆ ಇವು 'ಕರ್ಮಪದವನ್ನು ಅಪೇಕ್ಷಿಸದ' ಧಾತುಗಳು.

**ಉದಾ:** ಹೋಗು, ಬದುಕು, ಸಾಯು, ಏಳು, ನಿಲ್ಲು, ಮಲಗು ಇತ್ಯಾದಿ

ಇವು ಏನನ್ನು ಯಾರನ್ನು ಎಂದು ಪ್ರಶ್ನೆ ಮಾಡಿದಾಗ ಕ್ರಿಯೆಯ ದೊರಕದ ಧಾತುಗಳು.

downloaded from: www.kpscvaani.com


**ಉದಾ:** ಅವನು ಏನನ್ನು ನಿಂತನು? ಎಂಬ ಪ್ರಶ್ನೆಗೆ
ಕ್ರಿಯೆಯು ದೊರಕುವುದಿಲ್ಲ.

**ಕ್ರಿಯಾಪದಗಳು ಮೂರು ಅಂಶಗಳನ್ನು ಸೂಚಿಸುತ್ತವೆ.**
(1) ಕರ್ತೃವಿನ 'ಕ್ರಿಯೆ'ಯನ್ನು ಸೂಚಿಸುತ್ತವೆ.
(ಕರ್ತೃ ಎಂದರೆ ಕಾರಣರಾದವರು)
(2) ದಾತುಗಳಿಗೆ 'ಕಾಲಸೂಚಕ ಪ್ರತ್ಯಯ' ಗಳು ಸೇರುವ
ಮೂಲಕ, ಕ್ರಿಯಪದವು ಕ್ರಿಯೆಯ ಕಾಲವನ್ನು ಸೂಚಿಸುತ್ತದೆ.
(3) ಧಾತುವಿಗೆ ಆಖ್ಯಾತ ಪ್ರತ್ಯಯ'ಗಳು ಸೇರುವ ಮೂಲಕ (2
ಕ್ರಿಯಾಪದವು ಕರ್ತೃವಿನ ಲಿಂಗ, ವಚನಗಳನ್ನು ತಿಳಿಸುತ್ತದೆ. ಲಿಂಗ, ವಚನಗಳನ್ನು ತಿಳಿಸುತ್ತದೆ.

**ಉದಾ:**

| **ಧಾತು** | + | **ಕಾಲಸೂಚಕ ಪ್ರತ್ಯಯ** | + | **ಅಖ್ಯಾತ ಪ್ರತ್ಯಯ** | = | **ಕ್ರಿಯಾಪದ** |
|---|---|---|---|---|---|---|
| ಹೋಗು | + | ಉತ್ತ | + | ಆನೆ | = | ಹೋಗುತ್ತಾನೆ |
| ಹೋಗು | + | ದ | + | ಅಳು | = | ಹೋದಳು |
| ಹೋಗು | + | ವ | + | ಅನು | = | ಹೋಗುವನು |
| ಬರೆ | + | ಉತ್ತ | + | ಅಳೆ | = | ಬರೆಯುತ್ತಾಳೆ |
| ಓದು | + | ವ | + | ಎವು | = | ಓದುವೆವು |

ಮೇಲೆ ಕ್ರಿಯಾಪದಗಳನ್ನು ಬಿಡಿಸಿ ಬರೆಯಲಾಗಿದೆ. ಹಾಗೆ ಬರೆದಾಗ ಬಂದಿರುವ ಕಾಲಸೂಚಕ ಪ್ರತ್ಯಯಗಳಾದ 'ಉತ್ತ' ವರ್ತಮಾನ ಕಾಲವನ್ನು 'ದ' ಭೂತಕಾಲವನ್ನು ಮತ್ತು 'ವ' ಭವಿಷ್ಯತ್ ಕಾಲವನ್ನು ಸೂಚಿಸುತ್ತವೆ. ಕೊನೆಯಲ್ಲಿ ಬಂದಿರುವ ಅಖ್ಯಾತ ಪ್ರತ್ಯಯಗಳಾದ ಆನೆ, ಅಳು, ಅನು, ಆಳೆ, ಎವು ಇವೆಲ್ಲಾ ಕರ್ತೃವಿನ ಲಿಂಗ ಮತ್ತು ಏಕವಚನ – ಬಹುವಚನವನ್ನು ತಿಳಿಸುತ್ತವೆ.

ಧಾತುಗಳಿಗೆ ಕಾಲಸೂಚಕ ಮತ್ತು ಅಖ್ಯಾತ ಪ್ರತ್ಯಯಗಳು ಸೇರಿ ಕಾಲಾನುಸಾರವಾಗಿ ವರ್ತಮಾನ, ಭೂತ ಹಾಗೂ ಭವಿಷ್ಯತ್ ಎಂಬ ಮೂರು ರೂಪಗಳಿವೆ. ಅರ್ಥಾನುಸಾರವಾಗಿ ವಿಧ್ಯರ್ಥಕ, ಸಂಭವನಾರ್ಥಕ ಮತ್ತು ನಿಷೇಧಾರ್ಥಕ ಎಂಬ ಮೂರು ರೂಪಗಳಿವೆ.

* ಕ್ರಿಯಾಪದಕ್ಕೆ ಕಾಲಾನುಸಾರವಾಗಿ ವರ್ತಮಾನ, ಭೂತ ಮತ್ತು ಭವಿಷ್ಯತ್ ಎಂಬ ರೂಪಗಳು.
* ಅರ್ಥಾನುಸಾರವಾಗಿ ವಿಧ್ಯರ್ಥಕ, ಸಂಭಾವನಾರ್ಥಕ ಮತ್ತು ನಿಷೇಧಾರ್ಥಕ ಎಂಬ ರೂಪಗಳು.

**ಕಾಲಾನುಸಾರವಾಗಿ ಕ್ರಿಯಾಪದದ ರೂಪಗಳು:–**

**1) ವರ್ತಮಾನಕಾಲ:–**

ವರ್ತಮಾನ ಕಾಲವು ಈಗ ನಡೆಯುತ್ತಿರುವ ಕ್ರಿಯೆಯನ್ನು ಸೂಚಿಸುತ್ತದೆ. ಇಲ್ಲಿ ಧಾತುವಿಗೆ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಸೇರುತ್ತದೆ. ವಿವಿಧ ಅಖ್ಯಾತ ಪ್ರತ್ಯಯಗಳು ಸೇರುತ್ತವೆ.

**ವರ್ತಮಾನ ಕಾಲದ ಅಖ್ಯಾತ ಪ್ರತ್ಯಯಗಳು**

**ಕ್ರಿಯಾಪದ:– 'ನೋಡು'**

| ಸರ್ವನಾಮ | ಲಿಂಗ | ಏಕವಚನ | ಬಹುವಚನ |
|---|---|---|---|
| ಪ್ರಥಮ ಪುರುಷ | ಪುಲ್ಲಿಂಗ (ಅವನು, ಅವರು)<br>ಸ್ತ್ರೀಲಿಂಗ (ಅವಳು, ಅವರು)<br>ನಪುಂಸಕಲಿಂಗ (ಅದು, ಅವು) | ಆನೆ (ನೋಡುತ್ತಾನೆ)<br>ಆಳೆ (ನೋಡುತ್ತಾಳೆ)<br>ಅದೆ (ನೋಡುತ್ತದೆ) | ಆರೆ (ನೋಡುತ್ತಾರೆ)<br>ಆರೆ (ನೋಡುತ್ತಾರೆ)<br>ಅವೆ (ನೋಡುತ್ತವೆ) |

downloaded from: www.kpscvaani.com


| | | | |
|---|---|---|---|
| ಮಧ್ಯಮ ಪುರುಷ | ಪುಲ್ಲಿಂಗ (ನೀನು, ನೀವು)<br>ಸ್ತ್ರೀಲಿಂಗ (ನೀನು, ನೀವು) | ಈಯೆ (ನೋಡುತ್ತೀಯೆ)<br>ಈಯೆ (ನೋಡುತ್ತೀಯೆ) | ಈರಿ (ನೋಡುತ್ತೀರಿ)<br>ಈರಿ (ನೋಡುತ್ತೀರಿ) |
| ಉತ್ತಮ ಪುರುಷ | ಪುಲ್ಲಿಂಗ (ನಾನು, ನಾವು)<br>ಸ್ತ್ರೀಲಿಂಗ (ನಾನು, ನಾವು) | ಏನೆ (ನೋಡುತ್ತೇನೆ) | ಏವೆ (ನೋಡುತ್ತೇವೆ) |

**2) ಭೂತಕಾಲ:–**

ಮುಗಿದು ಹೋದ ಕ್ರಿಯೆಯನ್ನು ಸೂಚಿಸುವ ಕಾಲ ಭೂತಕಾಲ. ಇಲ್ಲಿ ಧಾತುವಿಗೆ 'ದ' ಎಂಬ ಕಾಲಸೂಚಕ ಪ್ರತ್ಯಯ ಮತ್ತು ವಿವಿಧ ಆಖ್ಯಾತ ಪ್ರತ್ಯಯಗಳು ಬರುತ್ತವೆ.

**ಭೂತಕಾಲದ ಆಖ್ಯಾತ ಪ್ರತ್ಯಯಗಳು**
**ಕ್ರಿಯಾಪದ:– 'ಹಾಡು'**

| ಸರ್ವನಾಮ | ಲಿಂಗ | ಏಕವಚನ | ಬಹುವಚನ |
|---|---|---|---|
| ಪ್ರಥಮ ಪುರುಷ | ಪುಲ್ಲಿಂಗ (ಅವನು, ಅವರು)<br>ಸ್ತ್ರೀಲಿಂಗ (ಅವಳು, ಅವರು)<br>ನಪುಂಸಕಲಿಂಗ (ಅದು, ಅವು) | ಅನು (ಹಾಡಿದನು)<br>ಅಳು (ಹಾಡಿದಳು)<br>ಇತು (ಹಾಡಿತು) | ಅರು (ಹಾಡಿದರು)<br>ಅರು (ಹಾಡಿದರು)<br>ಅವು (ಹಾಡಿದವು) |
| ಮಧ್ಯಮ ಪುರುಷ | ಪುಲ್ಲಿಂಗ (ನೀನು, ನೀವು)<br>ಸ್ತ್ರೀಲಿಂಗ (ನೀನು, ನೀವು) | ಎ (ಹಾಡಿದೆ)<br>ಎ (ಹಾಡಿದೆ) | ಇರಿ (ಹಾಡಿದಿರಿ)<br>ಇರಿ (ಹಾಡಿದಿರಿ) |
| ಉತ್ತಮ ಪುರುಷ | ಪುಲ್ಲಿಂಗ (ನಾನು, ನಾವು)<br>ಸ್ತ್ರೀಲಿಂಗ (ನಾನು, ನಾವು) | ಎನು (ಹಾಡಿದೆನು)<br>ಎನು (ಹಾಡಿದೆನು | ಎವು (ಹಾಡಿದೆವು)<br>ಎವು (ಹಾಡಿದೆವು) |

**3) ಭವಿಷ್ಯತ್ ಕಾಲ:–**

ಮುಂದೆ ನಡೆಯುವ ಕ್ರಿಯೆಯನ್ನು ಸೂಚಿಸುವ ಕಾಲವು ಭವಿಷ್ಯತ್ ಕಾಲ. ಇಲ್ಲಿ 'ವ' ಹಾಗೂ 'ಉವ' ಎಂಬ ಕಾಲಸೂಚಕ ಪ್ರತ್ಯಯಗಳಿರುತ್ತವೆ.

**ಭವಿಷ್ಯತ್ ಕಾಲದ ಆಖ್ಯಾತ ಪ್ರತ್ಯಯಗಳು**
**ಕ್ರಿಯಾಪದ:– 'ಮಾಡು'**

| ಸರ್ವನಾಮ | ಲಿಂಗ | ಏಕವಚನ | ಬಹುವಚನ |
|---|---|---|---|
| ಪ್ರಥಮ ಪುರುಷ | ಪುಲ್ಲಿಂಗ (ಅವನು, ಅವರು)<br>ಸ್ತ್ರೀಲಿಂಗ (ಅವಳು, ಅವರು)<br>ನಪುಂಸಕಲಿಂಗ (ಅದು, ಅವು) | ಅನು (ಮಾಡುವನು)<br>ಅಳು (ಮಾಡುವಳು)<br>ಅದು, ಉದು (ಮಾಡುವುದು) | ಅರು (ಮಾಡುವರು)<br>ಅರು (ಮಾಡುವರು)<br>ಅವು, ಉವು (ಮಾಡುವುವು) |
| ಮಧ್ಯಮ ಪುರುಷ | ಪುಲ್ಲಿಂಗ (ನೀನು, ನೀವು)<br>ಸ್ತ್ರೀಲಿಂಗ (ನೀನು, ನೀವು) | ಎ (ಮಾಡುವೆ)<br>ಎ (ಮಾಡುವೆ) | ಇರಿ (ಮಾಡುವಿರಿ)<br>ಇರಿ (ಮಾಡುವಿರಿ) |
| ಉತ್ತಮ ಪುರುಷ | ಪುಲ್ಲಿಂಗ (ನಾನು, ನಾವು)<br>ಸ್ತ್ರೀಲಿಂಗ (ನಾನು, ನಾವು) | ಎ/ಎನು (ಮಾಡುವೆ) (ಹೋಗುವೆವು)<br>ಎ/ಎನು (ಹೋಗುವೆ/ಹೋಗುವೆನು) | ಎವು (ಹೋಗುವೆವು)<br>ಎವು (ಮಾಡುವೆವು) |

**ಅರ್ಥಾನುಸಾರವಾಗಿ ಕ್ರಿಯಾಪದದ ರೂಪಗಳು**

**1) ವಿಧ್ಯರ್ಥಕ ಕ್ರಿಯಾಪದಗಳು:–**

ಆಜ್ಞೆ, ಅಪ್ಪಣೆ, ಉದ್ದೇಶ, ಆಶೀರ್ವಾದ, ಶುಭ ಹಾರೈಕೆ, ಪ್ರಾರ್ಥನೆ, ಕೋರಿಕೆ ಮೊದಲಾದ ಅರ್ಥವನ್ನು ಹೇಳುವ ಕ್ರಿಯಾಪದಗಳನ್ನು ವಿಧ್ಯರ್ಥಕ ಕ್ರಿಯಾಪದಗಳು ಎನ್ನುವರು.

ಇಲ್ಲಿ ಧಾತುವಿಗೆ ಕಾಲಸೂಚಕ ಪ್ರತ್ಯಯಗಳು ಸೇರುವುದಿಲ್ಲ. ನೇರವಾಗಿ ವಿಧ್ಯರ್ಥದ ಪ್ರತ್ಯಯಗಳು ಸೇರುತ್ತವೆ.

ಉದಾ: ಮಾಡಲಿ, ಹೋಗಲಿ, ಮಾಡೋಣ, ತಿಳಿಯಿರಿ, ಬನ್ನಿರಿ.

**ವಿಧ್ಯರ್ಥಕ ಪ್ರಯೋಗ:–**

1) ನೀಡು ದೇವರೇ (ಕೋರಿಕೆ, ಪ್ರಾರ್ಥನೆ)
2) ನಿನಗೆ ಒಳ್ಳೆಯದು ಆಗಲಿ (ಹಾರೈಕೆ)
3) ಶಾಲೆಗೆ ಹೋಗೋಣ (ಉದ್ದೇಶ)

downloaded from: www.kpscvaani.com


4) ನಿನ್ನ ಮನೆ ಹಾಳಾಗ (ಶಾಪ)
5) ಒಳಗೆ ಬನ್ನಿರಿ (ಅಪ್ಪಣೆ)

ವಿಧ್ಯರ್ಥಕ ಕ್ರಿಯಾಪದಗಳಲ್ಲಿ ಕೆಲವು ಸಂದರ್ಭಗಳಲ್ಲಿ **'ಅಲಿ'** ಪ್ರತ್ಯಯದ ಬದಲು **'ಅ'** ಪ್ರತ್ಯಯ ಸೇರುತ್ತದೆ.

**ಉದಾ:** ಹಾಳಾಗಲಿ – ಹಾಳಾಗ
ಹೊಡೆಯಲಿ – ಹೊಡೆಯ

ಅಂತ್ಯಾಕ್ಷರ **'ಯು'** ಇರುವ ಧಾತುಗಳಿಗೆ ಮಧ್ಯಮ ಪುರುಷ ಏಕವಚನದಲ್ಲಿ **'ಇ'** ಪ್ರತ್ಯಯ ಸೇರುತ್ತದೆ. ಬಹುವಚನದಲ್ಲಿ **'ಇರಿ'** ಪ್ರತ್ಯಯ ಸೇರುತ್ತದೆ.

**ಉದಾ:** ಒಯ್ಯು – ಒಯ್ಯಿ – ಒಯ್ಯಿರಿ
ಸಾಯು – ಸಾಯಿ – ಸಾಯಿರಿ
ಕಾಯು – ಕಾಯಿ – ಕಾಯಿರಿ

**2) ನಿಷೇಧಾರ್ಥಕ ಕ್ರಿಯಾಪದಗಳು:–**

ಕ್ರಿಯೆಯು ನಡೆಯಲಿಲ್ಲ ಮತ್ತು ನಡೆಯುವುದಿಲ್ಲ ಎಂಬ ಅರ್ಥವನ್ನು ಹೊಂದಿರುವ ಕ್ರಿಯಾಪದಗಳು ನಿಷೇಧಾರ್ಥಕ ಕ್ರಿಯಾಪದಗಳು.

**ಉದಾ:** ಕೃಷ್ಣನು ಹಣ್ಣನ್ನು ತಿನ್ನನು
ಕಮಲೆಯು ಆಟಕ್ಕೆ ಬಾರಳು

ಇಲ್ಲಿ **'ತಿನ್ನನು'** ಎಂಬ ಕ್ರಿಯಾಪದ ತಿನ್ನುವುದಿಲ್ಲ ಎಂಬ ಅರ್ಥವನ್ನು **'ಬಾರಳು'** ಎಂಬ ಕ್ರಿಯಾಪದ ಬರುವುದಿಲ್ಲ ಎಂಬ ಅರ್ಥ ಕೊಡುತ್ತದೆ.

**ಉದಾ:**
**ಕ್ರಿಯಾಪದ:– 'ಮಾಡು'**

| ಸರ್ವನಾಮ | ಲಿಂಗ | ಏಕವಚನ | ಬಹುವಚನ |
|---|---|---|---|
| ಪ್ರಥಮ ಪುರುಷ | ಪುಲ್ಲಿಂಗ<br>ಸ್ತ್ರೀಲಿಂಗ<br>ನಪುಂಸಕಲಿಂಗ | ಮಾಡನು<br>ಮಾಡಳು<br>ಮಾಡದು | ಮಾಡರು<br>ಮಾಡರು<br>ಮಾಡವು |
| ಮಧ್ಯಮ ಪುರುಷ | ಪುಲ್ಲಿಂಗ<br>ಸ್ತ್ರೀಲಿಂಗ | ಮಾಡೆ<br>ಮಾಡೆ | ಮಾಡರಿ<br>ಮಾಡರಿ |
| ಉತ್ತಮ ಪುರುಷ | ಪುಲ್ಲಿಂಗ<br>ಸ್ತ್ರೀಲಿಂಗ | ಮಾಡೆ/ಮಾಡೆನು<br>ಮಾಡೆ/ಮಾಡೆನು | ಮಾಡೆವು<br>ಮಾಡೆವು |

ನಿಷೇಧಾರ್ಥಕ ಕ್ರಿಯಾಪದಗಳು ಮೇಲಿನ ಅಖ್ಯಾತ ಪ್ರತ್ಯಯಗಳಲ್ಲದೆ, **ಇಲ್ಲ, ಆಗದು, ಕೂಡದು, ಬೇಡ ಇತ್ಯಾದಿ** ನಿಶೇಧಾರ್ತಕ ಪ್ರತ್ಯಯಗಳನ್ನು ಹೊಂದಿರುತ್ತವೆ.

**ಉದಾ:–** ನಡೆಯುವುದಿಲ್ಲ, ಹೇಳುತ್ತಿಲ್ಲ, ಬರೆದಿಲ್ಲ, ಬರೆಯಲಾರೆ, ಬರೆಯಬೇಡ, ಕಾಣುತ್ತಿಲ್ಲ, ಕಂಡಿಲ್ಲ, ಕಾಣದು, ಬರಕೂಡದು, ಹೋಗಬೇಡ, ಹೋಗಲಾರನು, ಓದಲಾರೆ, ಓದಲಾಗದು, ಓದನು, ತರಬೇಡ, ಬಾರನು, ತಿಂದಿಲ್ಲ, ಸಿಕ್ಕದು, ನೋಡೆವು, ತಿನ್ನಕೂಡದು, ಇತ್ಯಾದಿ.

**3) ಸಂಭಾವನಾರ್ಥಕ ಕ್ರಿಯಾಪದಗಳು (ಸಂಶಯಾರ್ಥಕ)**

ಕ್ರಿಯಾಪದವು ಕ್ರಿಯೆಯು ನಡೆಯುವುದರ ಬಗ್ಗೆ 'ಸಂದೇಹ' ಅಥವಾ 'ಊಹೆ' ಯನ್ನು ತೋರುತ್ತಿದ್ದರೆ ಅದು ಸಂಭಾವನಾರ್ಥಕ ಕ್ರಿಯಾಪದ ಎನಿಸಿಕೊಳ್ಳುತ್ತದೆ.

**ಉದಾ: 'ಗೆಲ್ಲು'** ಎಂಬ ಧಾತುವನ್ನು ತೆಗೆದುಕೊಂಡಾಗ

| | |
|---|---|
| ಅವನು ಗೆದ್ದಾನು | ಅವರು ಗೆದ್ದಾರು |
| ಅದು ಗೆದ್ದೀತು | ಅದು ಗೆದ್ದೀತು |
| ನೀನು ಗೆದ್ದೀಯೆ | ನೀವು ಗೆದ್ದೀರಿ |
| ನಾನು ಗೆದ್ದೇನು | ನಾವು ಗೆದ್ದೇವು ಇತ್ಯಾದಿ |

**ವಾಕ್ಯದಲ್ಲಿ ಸಂಭಾವನಾರ್ಥ ಕ್ರಿಯಾಪದಗಳ ಬಳಕೆ**

1) ನಮ್ಮ ಮನೆಗೆ ನೀವೇಕೆ **ಬಂದೀರಿ**
2) ತಾಳಿದವನು **ಬಾಳಿಯಾನು**
3) ನಾನು ಹೋದರೆ **ಹೋದೇನು**
4) ಎಚ್ಚರ, ಕೈಯಿಂದ **ಬಿದ್ದೀತು**
5) ಗೋಳ್ಳೆಂದು **ನಕ್ಕಾರು**
6) ಇದರ ಹತ್ತಿರ **ಸುಳಿದೀಯೆ**

ಮೇಲಿನ ವಾಕ್ಯದಲ್ಲಿ 'ಸುಳಿದೀಯೆ' ಎಂಬ ಕ್ರಿಯಾಪದವು ಸುಳಿಯಬೇಡ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಮಧ್ಯಮ ಪುರುಷದಲ್ಲಿ ಸಂಭವನಾರ್ಥಕ ರೂಪಗಳು "ಈ ಕೆಲಸ ಮಾಡಬೇಡ" ಎಂಬ ಅರ್ಥದಲ್ಲಿ ಉಪಯೋಗಿಸಲ್ಪಡುತ್ತವೆ.

ಹೋಗಬಹುದು, ಬರಬಹುದು, ತಿನ್ನಬಹುದು ಇಂತಹ ಸಂಯುಕ್ತ ಕ್ರಿಯಾಪದಗಳು ಸಂಭನಾರ್ಥದಲ್ಲಿ ಬಳಕೆಯಾಗುತ್ತವೆ.

## 8 ಸಂಧಿಗಳು

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೇ ಸೇರುವುದಕ್ಕೆ ಸಂಧಿ ಎಂದು ಕರೆಯುತ್ತಾರೆ.

**ಉದಾ:** ಊರು + ಅನ್ನು = ಊರನ್ನು
ಮಾಲೆ + ಅನ್ನು = ಮಾಲೆಯನ್ನು

**ಸಂಧಿಪದ**

ಇಲ್ಲಿ ಪೂರ್ವಪದವು 'ಉತ್ತರಪದ'ದೊಂದಿಗೆ ಸೇರಿ ಸಂಧಿಪದಿ ಆಗಿದೆ.

ಪೂರ್ವಪದ + ಉತ್ತರಪದ = ಸಂಧಿಪದ

**ಸಂಧಿಕಾರ್ಯ**

downloaded from: www.kpscvaani.com


ಎರಡು ಅಕ್ಷರಗಳು ಪರಸ್ಪರ ಕೂಡಿ ಸಂಧಿಯಾದಾಗ ಮುಂಚೆ ಇದ್ದ ಅಕ್ಷರವು ಬಿಟ್ಟು ಹೋಗುವುದು ಮತ್ತು ಹೊಸದೊಂದು ಅಕ್ಷರವು ಬಂದು ಸೇರುವುದು ಇದನ್ನು ಸಂಧಿಕಾರ್ಯ ಎನ್ನುವರು.

**ಸಂಧಿಗಳಲ್ಲಿ ಮೂಲಭೂತವಾಗಿ 2 ವಿಧಗಳಿವೆ**

**(1) ಕನ್ನಡ ಸಂಧಿ**

**(2) ಸಂಸ್ಕೃತ ಸಂಧಿ**

## I. ಕನ್ನಡ ಸಂಧಿಗಳು

ಕನ್ನಡ ಸಂಧಿಗಳಲ್ಲಿ 3 ವಿಧ

1) ಲೋಪಸಂಧಿ
2) ಆಗಮಸಂಧಿ
3) ಆದೇಶಸಂಧಿ

ಇವುಗಳಲ್ಲಿ 'ಲೋಪಸಂಧಿ' ಮತ್ತು 'ಆಗಮಸಂಧಿ' ಗಳನ್ನು ಸ್ವರಸಂಧಿಗಳೆಂದೂ ಹಾಗೂ 'ಆದೇಶಸಂಧಿ'ಯನ್ನು ವ್ಯಂಜನ ಸಂಧಿಯೆಂತಲೂ ಕರೆಯುತ್ತಾರೆ.

**ಸ್ವರಸಂಧಿಗಳು**

ಎ) ಲೋಪಸಂಧಿ ಬಿ) ಆಗಮಸಂಧಿ

**ವ್ಯಂಜನಸಂಧಿ**

ಎ) ಆದೇಶಸಂಧಿ

**<u>ಸ್ವರಸಂಧಿ:–</u>** ಸ್ವರದ ಮುಂದೆ ಸ್ವರ ಬಂದು ಸಂಧಿಯಾದರೆ ಅದನ್ನು ಸ್ವರ ಸಂಧಿ ಎನ್ನುವರು.

ಉದಾ: ಊರು + ಅನ್ನು = ಊರನ್ನು

**ವ್ಯಂಜನ ಸಂಧಿ:–** ಸ್ವರದ ಮುಂದೆ ವ್ಯಂಜನ ಬಂದು ಸಂಧಿಯಾದರೆ ಅದನ್ನು ವ್ಯಂಜನ ಸಂಧಿ ಎನ್ನುವರು.

ಉದಾ: ಮನೆ + ಇಂದ = ಮನೆಯಿಂದ
ಮಳೆ + ಕಾಲ = ಮಳೆಗಾಲ

**(1) ಲೋಪಸಂಧಿ:–**

ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವಪದದ ಅಂತ್ಯದಲ್ಲಿರುವ ಸ್ವರವೂ, ಅರ್ಥ ಕೆಡದಿದ್ದ ಪಕ್ಷದಲ್ಲಿ ಮಾತ್ರ ಲೋಪವಾಗುತ್ತದೆ. ಇದನ್ನು "ಲೋಪಸಂಧಿ" ಎನ್ನುವರು.

**<u>ಉದಾ:</u>** ಊರು + ಅನ್ನು = ಊರನ್ನು (**ಇಲ್ಲಿ 'ಉ' ಲೋಪವಾಗಿದೆ)**

ಅಲ್ಲಿ + ಒಂದು = ಅಲ್ಲೊಂದು
ಬೇರೆ + ಒಬ್ಬ = ಬೇರೊಬ್ಬ
ಬಲ್ಲೆನು + ಎಂದು = ಬಲ್ಲೆನೆಂದು
ಮಾತು + ಅಂತು = ಮಾತಂತು
ಸಂಪನ್ನರು + ಆದ = ಸಂಪನ್ನರಾದ
ಊರು + ಊರು = ಊರೂರು
ಜನರು + ಎಲ್ಲ = ಜನರೆಲ್ಲ ಇತ್ಯಾದಿ

**(2) ಆಗಮಸಂಧಿ:–**

'ಲೋಪಸಂಧಿ'ಯನ್ನು ಮಾಡುವಾಗ ಅರ್ಥ ಕೆಡದಂತಿರುವುದನ್ನು ಗಮನಿಸುತ್ತೇವೆ. ಪೂರ್ವಪದದ ಅಂತ್ಯದ ಸ್ವರವನ್ನು ಲೋಪಮಾಡಿ ಅರ್ಥಕೆಡದಂತೆ ಎಂದಿಗೂ ಸಂಧಿ ಮಾಡುವುದಿಲ್ಲ. ಅಂತಹ ಸಂದರ್ಭಗಳಲ್ಲಿ 'ಯ್' ಅಥವಾ 'ವ್' ಎಂಬ ವ್ಯಂಜನಗಳನ್ನು ಹೊಸದಾಗಿ ಸೇರಿಸಿ ಸಂಧಿ ಮಾಡುತ್ತೇವೆ, ಅಂದರೇ ಹೊಸದಾಗಿ ಆ ವ್ಯಂಜನಗಳನ್ನು ಆಗಮಿಸಲು ಅನುವುಮಾಡಿಕೊಡುತ್ತೇವೆ. 'ಯ್' ಕಾರ ಆಗಮವಾಗುವುದಕ್ಕೆ 'ಯ' ಕಾರಾಗಸಂಧಿ ಎಂತಲೂ 'ವ' ಕಾರ ಆಗಮವಾಗುವುದಕ್ಕೆ 'ವ' ಕಾರಾಗಮ ಸಂಧಿ ಎಂತಲೂ ಕರೆಯುತ್ತಾರೆ.

| 'ಯ'ಕಾರಾಗಮ ಸಂಧಿ | 'ವ'ಕಾರಾಗಮ ಸಂಧಿ |
|---|---|
| ಆ, ಇ, ಈ, ಎ, ಏ, ಐ ಗಳ ಮುಂದೆ ಸ್ವರ ಪರವಾದರೆ ಆ ಎರಡೂ ಸ್ವರಗಳ ಮಧ್ಯೆ 'ಯ್' ಕಾಱುವು ಆಗಮವಾಗುತ್ತದೆ.<br>ಉದಾ: ಕಾ+ಅದೆ =ಕಾಯದೆ<br>ಮಿ + ಅಲು = ಮೀಯಲು<br>ನೊ + ಇಸು =ನೋಯಿಸು<br>ಕೈ + ಅಲ್ಲಿ = ಕೈಯಲ್ಲಿ | ಉ, ಊ, ಋ ಮತ್ತು ಓ ಸ್ವರಗಳ ಮುಂದೆ ಯಾವುದೇ ಸ್ವರ ಬಂದಾಗ 'ವ' ಕಾರ ಆಗಮವಾಗುತ್ತದೆ.<br>ಉದಾ: ಗುರು+ಅನ್ನು = ಗುರುವನ್ನು<br>ಪಶು+ ಅನ್ನು = ಪಶುವನ್ನು<br>ಪೂ + ಇನ = ಪೂವಿಂದ<br>ಮನು + ಇನ = ಮನುವಿನ<br>ಭ್ರಾತೃ+ ಅನ್ನು =ಭ್ರಾತೃವನ್ನು<br>ಗೋ+ ಅನ್ನು = ಗೋವನ್ನು |

**(3) ಆದೇಶ ಸಂಧಿ:–**

**"ಕ, ಚ, ಟ, ತ, ಪ' ಪದಗಳಿಗೆ "ಗ, ಜ, ಡ, ದ, ಬ"** ಪದಗಳು ಆದೇಶವಾಗಿ ಬರುವುದಕ್ಕೆ ಆದೇಶಸಂಧಿ ಎನ್ನುವರು.

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಮತ್ತೊಂದು ಅಕ್ಷರ ಬರುವುದನ್ನು ಆದೇಶಸಂಧಿ ಎನ್ನುತ್ತೇವೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಸಾಮಾನ್ಯವಾಗಿ ಸಮಾಸಗಳಾಗುವ ಸಂದರ್ಭದಲ್ಲಿ ಇಂತಹ ಆದೇಶಸಂಧಿ ಘಟಿಸುವುದುಂಟು. ಹೆಚ್ಚಾಗಿ ಕ, ತ, ಪ ಗಳಿಗೆ ಗ, ದ, ಬಗಳು ಆದೇಶವಾಗುವುದು ಹೆಚ್ಚು ಕಂಡು ಬರುತ್ತದೆ.

**<u>ಉದಾ:</u>** ಕೆಳ + ತುಟಿ = ಕೆಳದುಟಿ
ಹುಲ್ಲು + ಕಾವಲು = ಹುಲ್ಲುಗಾವಲು

downloaded from: www.kpscvaani.com


ಹಳತು + ಕನ್ನಡ = ಹಳಗನ್ನಡ
ಎಳೆ + ಕರು = ಎಳೆಗರು
ಮನೆ + ಕೆಲಸ = ಮನೆಗೆಲಸ
ಬೆಟ್ಟ + ತಾವರೆ = ಬೆಟ್ಟದಾವರೆ
ಎಳ + ಬಳ್ಳಿ = ಎಳಬಳ್ಳಿ
ಮೈ + ತೊಳೆ = ಮೈದೊಳೆ ಇತ್ಯಾದಿ

**II. ಸಂಸ್ಕೃತ ಸಂಧಿಗಳು**

**ಸಂಸ್ಕೃತ ಸ್ವರ ಸಂಧಿಗಳು**
1) ಸವರ್ಣದೀರ್ಘಸಂಧಿ
2) ಗುಣಸಂಧಿ
3) ವೃದ್ಧಿ ಸಂಧಿ
4) ಯಣ್ ಸಂಧಿ

**ಸಂಸ್ಕೃತ ವ್ಯಂಜನ ಸಂಧಿಗಳು**
1) ಜಸ್ತ್ವ ಸಂಧಿ
2) ಶ್ಚುತ್ವ ಸಂಧಿ
3) ಅನುನಾಸಿಕ ಸಂಧಿ

**ಸಂಸ್ಕೃತ ಸ್ವರ ಸಂಧಿಗಳು**

ಸಂಧಿಕಾರ್ಯದಲ್ಲಿ ಪೂರ್ವಪದ ಮತ್ತು ಎರಡೂ ಸಂಸ್ಕೃತ ಪದಗಳಾಗಿರುವ ಸಂಧಿಯನ್ನು 'ಸಂಸ್ಕೃತ ಸಂಧಿ' ಎನ್ನುವರು.

**(1) ಸವರ್ಣದೀರ್ಘ ಸಂಧಿ:–**

ಸವರ್ಣ ಸ್ವರಗಳು ಒಂದರ ಮುಂದೊಂದು ಬಂದು ಸಂಧಿಯಾಗುವಾಗ ಒಂದೇ ದೀರ್ಘ ಸ್ವರವು ಆದೇಶವಾಗಿ ಬರುವುದಕ್ಕೆ 'ಸವರ್ಣ ದೀರ್ಘ ಸಂಧಿ' ಎಂದು ಕರೆಯುತ್ತಾರೆ.

ಉದಾ: ಹಿಮ + ಆಲಯ = ಹಿಮಾಲಯ
ಕವಿ + ಇಂದ್ರ = ಕವೀಂದ್ರ
ಸುರ + ಅಸುರ = ಸುರಾಸುರ
ವಧು + ಉಪೀತ = ವಧೂಪೀತ
ವಿದ್ಯಾ + ಅಭ್ಯಾಸ = ವಿದ್ಯಾಭ್ಯಾಸ
ಗುರು + ಉಪದೇಶ = ಗುರೂಪದೇಶ

**(2) ಗುಣಸಂಧಿ:–**

ಅ, ಆ ಕಾರಗಳ ಮುಂದೆ ಇ, ಈ ಕಾರ ಬಂದರೇ = ಏ ಕಾರವು
ಅ, ಆ ಕಾರಗಳ ಮುಂದೆ ಉ, ಊ ಕಾರ ಬಂದರೇ = ಓ ಕಾರವು
ಅ, ಆ ಕಾರಗಳ ಮುಂದೆ ಋ ಕಾರ ಬಂದರೇ = ಅರ್ ಕಾರವು
ಆದೇಶವಾಗುವುದಕ್ಕೆ (ಬರುವುದಕ್ಕೆ) ಗುಣಸಂಧಿ ಎನ್ನುವರು.

<u>**ಉದಾ:**</u> ಸುರ + ಈಶ = ಸುರೇಶ
ಗಣ + ಈಶ = ಗಣೇಶ
ಮಹಾ + ಈಶ್ವರ = ಮಹೇಶ್ವರ
ಮಹಾ + ಉದಯ = ಮಹೋದಯ
ಸಮಯ + ಉಚಿತ = ಸಮಯೋಚಿತ
ಸುರ + ಇಂದ್ರ = ಸುರೇಂದ್ರ
ಧರ + ಇಂದ್ರ = ಧರೇಂದ್ರ
ಚಂದ್ರ + ಉದಯ = ಚಂದ್ರೋದಯ
ಬ್ರಹ್ಮ + ಋಷಿ = ಬ್ರಹ್ಮರ್ಷಿ
ದೇವ + ಋಷಿ = ದೇವರ್ಷಿ
ಮಹಾ + ಋಷಿ = ಮಹರ್ಷಿ ಇತ್ಯಾದಿ

**(3) ವೃದ್ಧಿ ಸಂಧಿ:–**

ಅ, ಆ ಕಾರಗಳಿಗೆ ಏ, ಐ ಕಾರಗಳು ಪರವಾದಾಗ ಎದುರಾಗಿ ಸಂಧಿಯಾದಾಗ 'ಐ' ಕಾರವು, ಓ ಔ ಕಾರಗಳು ಎದುರಾಗಿ ಸಂಧಿಯಾದಾಗ 'ಔ' ಕಾರವು ಆದೇಶವಾಗುವುದೇ ವೃದ್ಧಿ ಸಂಧಿ.

ಉದಾ: ಅ, ಆ ಕಾರಗಳಿಗೆ ಏ, ಐ ಕಾರಗಳು ಬಂದಾಗ,
ಏಕ + ಏಕ = ಏಕೈಕ
ಲೋಕ + ಏಕ = ಲೋಕೈಕ
ಜನ + ಐಕ್ಯ = ಜನೈಕ್ಯ
ಭಾವ + ಐಕ್ಯ = ಭಾವೈಕ್ಯ
ಅಷ್ಟ + ಐಶ್ವರ್ಯ = ಅಷ್ಟೈಶ್ವರ್ಯ

<u>**ಉದಾ:**</u> ಅ, ಆ ಕಾರಗಳ ಮುಂದೆ ಓ, ಔ ಕಾರಗಳು ಬಂದಾಗ
ವನ + ಔಷಧ = ವನೌಷಧ
ಜಲ + ಓಘ = ಜಲೌಘ
ಘನ + ಔದಾರ್ಯ = ಘನೌದಾರ್ಯ
ಮಹಾ + ಔದಾರ್ಯ = ಮಹೌದಾರ್ಯ
ಜನ + ಔಷಧ = ಜನೌಷಧ

**(4) ಯಣ್ ಸಂಧಿ:–**

ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೇ [ಇ, ಈ ಕಾರಗಳಿಗೆ 'ಯ' ಕಾರವು] [ಉ, ಊ, ಕಾರಗಳಿಗೆ 'ವ್' ಕಾರವು] [ ಋ ಕಾರಕ್ಕೆ 'ರ್' ಕರಾವು] ಆದೇಶವಾಗುವುದಕ್ಕೆ ಯಣ್ ಸಂಧಿ ಎಂದು ಕರೆಯುತ್ತೇವೆ.

**'ಯ್' ಕಾರವು ಆದೇಶವಾಗುವಿಕೆ**

downloaded from: www.kpscvaani.com


ಜಾತಿ + ಅತೀತ = ಜಾತ್ಯಾತೀತ
ಅತಿ + ಅಂತ = ಅತ್ಯಂತ
ಕೋಟಿ + ಅಧಿಪತಿ = ಕೋಟ್ಯಾಧಿಪತಿ
ಗತಿ + ಅಂತರ = ಗತ್ಯಂತರ
ಅತಿ + ಅವಸರ = ಅತ್ಯವಸರ

**'ವ್' ಕಾರವು ಆದೇಶವಾಗುವುದು**

ಮನು + ಅಂತರ = ಮನ್ವಂತರ
ಅಣು + ಅಸ್ತ್ರ = ಅಣ್ವಸ್ತ್ರ
ಮನು + ಆದಿ = ಮನ್ವಾದಿ

**'ರ್' ಕಾರದ ಆದೇಶ**

ಕರ್ತೃ + ಅರ್ಥ = ಕರ್ತ್ರಾರ್ಥ
ಪಿತೃ + ಆರ್ಜಿತ = ಪಿತ್ರಾರ್ಜಿತ
ಮಾತೃ + ಅಂಶ = ಮಾತ್ರಾಂಶ ಇತ್ಯಾದಿ

ಸಂಸ್ಕೃತ ವ್ಯಂಜನ ಸಂಧಿಗಳು
ಸಂಸ್ಕೃತ ವ್ಯಂಜನ ಸಂಧಿಗಳಲ್ಲಿ 3 ವಿಧ

**(1) ಜಸ್ತ್ವ ಸಂಧಿ:–**

ಸಂಸ್ಕೃತದಲ್ಲಿ 'ಜಶ್' ಎಂದರೆ ಗ, ಜ, ದ, ಡ, ಬ ಅಕ್ಷರಗಳು ಎಂದು ಅರ್ಥ.

ಪೂರ್ವ ಪದದ ಕೊನೆಯಲ್ಲಿರುವ ಕ,ಚ,ಡ,ದ,ಬ ವ್ಯಂಜನಗಳಿಗೆ ಯಾವ ವರ್ಣ ಪದವಾದರೂ (ಎದುರಾದರೂ) ಬಹುತೇಕ ಅದೇ ವರ್ಣದ 3ನೆಯ ವ್ಯಂಜನಾಕ್ಷರವು ಆದೇಶವಾಗುವುದನ್ನು ಜಶ್ತ್ವಸಂಧಿ ಎನ್ನುವರು.

ಉದಾ: ದಿಕ್ + ಅಂತ = ದಿಗಂತ [ಇಲ್ಲಿ ಪೂರ್ವ ಪದದ ಕೊನೆಯಲ್ಲಿನ 'ಕ' ವ್ಯಂಜನಕ್ಕೆ ಅದೇ ವರ್ಗದ ಮೂರನೇ ಅಕ್ಷರ'ಗ' ಆದೇಶ]

ವಾಕ್ + ದಾನ = ವಾಗ್ದಾನ
ವಾಕ್ + ದೇವಿ = ವಾಗ್ದೇವಿ
ದಿಕ್ + ದೇವತೆ = ದಿಗ್ದೇವತೆ
ಅಚ್ + ಅಂತ = ಅಜಂತ
ಷಟ್ + ಆನನ = ಷಡಾನನ
ಷಟ್ + ಅಂಗ = ಷಡಂಗ
ಸತ್ + ಉದ್ಯೋಗ = ಸದುದ್ಯೋಗ
ಅಪ್ + ಜಾ = ಅಬ್ಜಾ

**(2) ಶ್ಚುತ್ವ ಸಂಧಿ:–**

'ಶ್ಚು' ಎಂದರೆ 'ಶ' ಕಾರ ಮತ್ತು 'ಚ' ವರ್ಣಾಕ್ಷರಗಳು (ಚ,ಛ,ಜ,ಝ,ಞ) ಈ ಸಂಧಿಯಲ್ಲಿ ಪೂರ್ವಪದದ ಕೊನೆಯಲ್ಲಿನ 'ಸ' ಕಾರದ ಮುಂದೆ 'ಶ' ಕಾರ ಮತ್ತು 'ಚ' ವರ್ಣಾಕ್ಷರಗಳು ಬಂದರೆ, 'ಸ' ಕಾರಕ್ಕೆ 'ಶ' ಕಾರದ ಆದೇಶವಾಘುತ್ತದೆ.

**ಉದಾ:** ಮನಸ್ + ಶಾಂತಿ = ಮನಶ್ಶಾಂತಿ
ತಪಸ್ + ಚರ್ಯ = ತಪಶ್ಚರ್ಯ

ಈ ಸಂಧಿಯಲ್ಲಿ 'ತ' ವರ್ಣಾಕ್ಷರಗಳು ತ,ಥ,ದ,ಧ,ನ ಮುಂದೆ 'ಚ' ವರ್ಣಾಕ್ಷರಗಳು ಆದೇಶವಾಗುತ್ತವೆ.

**<u>ಉದಾ:</u>** ಸತ್ + ಜನ = ಸಜ್ಜನ
ಸತ್ + ಚಾರಿತ್ರ್ಯ = ಸಚ್ಚಾರಿತ್ರ್ಯ
ಯಶಸ್ + ಚಂದ್ರಿಕೆ = ಯಶಶ್ಚಂದ್ರಿಕೆ
ಶರತ್ + ಚಂದ್ರ = ಶರತ್ಶ್ಚಂದ್ರ
ಜಗತ್ + ಜ್ಯೋತಿ = ಜಗಜ್ಯೋತಿ
ಸತ್ + ಚಿತ್ರ = ಸಚ್ಚಿತ್ರ್ಯ
ಜಗತ್ + ಜನನಿ = ಜಗಜ್ಜನನಿ

**(3) ಅನುನಾಸಿಕ ಸಂಧಿ:–**

ವರ್ಗದ ಪ್ರಥಮ ವರ್ಣಗಳಿಗೆ ಕ,ಚ,ಟ,ತ,ಪ ಗಳಿಗೆ ಯಾವ ಅನುನಾಸಿಕ ಅಕ್ಷರ ಪರವಾದರೂ ಅವುಗಳಿಗೆ ಖ,ಛ,ಠ,ಥ,ಫ ವ್ಯಂಜನಗಳಿಗೆ ಕ್ರಮವಾಗಿ ಙ,ಞ,ಣ,ನ,ಮ ಗಳು ಪರವಾಗುವುದೇ ಅನುನಾಸಿಕ ಸಂಧಿ ಎನ್ನುವರು.

ಉದಾ: ಷಟ್ + ಮುಖ = ಷಣ್ಮುಖ
ವಾಕ್ + ಮಾಧುರ್ಯ = ವಾಗ್ಮಾದುರ್ಯ
ತಿಕ್ + ಮಯ = ತಿಗ್ಮಯ
ಶತ್+ ಮಣಿ = ಶಣ್ಮಣಿ
ಋತ್ + ಮಾನ = ಋನ್ಮಾನ
ಉತ್ + ಮಾದ= ಉನ್ಮಾದ
ಜಗತ್ + ನಾಥ = ಜಗನ್ನಾಥ
ದಿಕ್ + ಮೂಢ = ದಿಙ್ಮೂಢ
ಜಗತ್ + ಮಾತಾ = ಜಗನ್ಮಾತಾ

## 9. ಸಮಾಸಗಳು

ಎರಡು ಅಥವಾ ಅನೇಕ ಪದಗಳನ್ನು ಅರ್ಥಕ್ಕೆ ಅನುಗುಣವಾಗಿ ಸೇರಿಸಿ (ಅರ್ಥಕ್ಕೆ ಲೋಪ ಬಾರದ ರೀತಿಯಲ್ಲಿ) ಒಂದೇ ಪದವನ್ನಾಗಿ ಮಾಡುವ ಪ್ರಕ್ರಿಯೆಯನ್ನು 'ಸಮಾಸ' ಎಂದು ಕರೆಯುತ್ತಾರೆ. ಹೀಗೆ ರಚನೆಗೊಳ್ಳುವ ಸಮಸ್ತ ಪದ ಅಥವಾ ಸಮಾಸದ ಮೊದಲ ಪದವು ಪೂರ್ವವೆಂತಲೂ ಎರಡನೆಯ ಪದವು ಉತ್ತರ ಪದವೆಂತಲೂ ಕರೆಯಲ್ಪಡುತ್ತದೆ. ಸಮಸ್ತ ಪದವನ್ನು ಬಿಡಿಸಿ ಬರೆಯುವುದನ್ನು ವಿಗ್ರಹ ವಾಕ್ಯ ಎಂದು ಕರೆಯುತ್ತಾರೆ.

ಸಮಾಸ ರಚನೆ ಮಾಡುವಾಗ ಸಂಸ್ಕೃತ ಪದಕ್ಕೆ ಸಂಸ್ಕೃತ ಪದವನ್ನೇ ಸೇರಿಸಬೇಕೇ ಹೊರತು ಸಂಸ್ಕೃತಕ್ಕೆ ಕನ್ನಡ ಅಥವಾ ಕನ್ನಡಕ್ಕೆ ಸಂಸ್ಕೃತ ಪದಗಳನ್ನು ಸೇರಿಸಬಾರದು. ಹಾಗೆ

downloaded from: www.kpscvaani.com


ಸೇರಿಸಿದರೆ ಅದು ಅರಿ ಸಮಾಸ ಎನಿಸುತ್ತದೆ. ಆದರೆ ಪೂರ್ವದ ಕವಿಗಳು ಮಾಡಿರುವಲ್ಲಿ, ಬಿರುದಾವಳಿಗಳಲ್ಲಿ ಗಮಕ ಮತ್ತು ಕ್ರಿಯಾ ಸಮಾಸಗಳಲ್ಲಿ ಮಾಡಿದ್ದರೆ ದೋಷವಿಲ್ಲ.

ಸಮಾಸದಲ್ಲಿ ಉತ್ತರಪದ ಅರ್ಥಪ್ರಧಾನ ಸಮಾಸ ಉಭಯಪದ ಅರ್ಥ ಪ್ರಾಧನ ಸಮಾಸ, ಅನ್ಯಪದ ಅರ್ಥ ಸಮಾಸ ಎಂಬ ಪ್ರಭೇದಗಳಿವೆ.

**ಈ ಪ್ರಭೇದಗಳ ಆಧಾರದಿಂದ ಕನ್ನಡದಲ್ಲಿ ಒಟ್ಟು 8 ವಿಧದ ಸಮಾಸಗಳಿವೆ. ಅವುಗಳೆಂದರೆ,**

1) ತತ್ಪುರುಷ ಸಮಾಸ
2) ದ್ವಿಗು ಸಮಾಸ
3) ಕರ್ಮಧಾರೆಯ ಸಮಾಸ
4) ದ್ವಂದ್ವ ಸಮಾಸ
5) ಅಂಶಿ ಸಮಾಸ
6) ಬಹುವ್ರೀಹಿ ಸಮಾಸ
7) ಕ್ರಿಯಾ ಸಮಾಸ
8) ಗಮಕ ಸಮಾಸ

**1) ತತ್ಪುರುಷ ಸಮಾಸ:–**

ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರ ಪದದ ಅರ್ಥವು ಪ್ರಧಾನವಾಗಿರುವ ಸಮಾಸಕ್ಕೆ ತತ್ಪುರುಷ ಸಮಾಸ ಎನ್ನುವರು.

ಉದಾ: ತಲೆಯಲ್ಲಿ + ನೋವು = ತಲೆನೋವು

ಈ ಉದಾಹರಣೆಯಲ್ಲಿ ಉತ್ತರ ಪದದ ಅರ್ಥವೇ ಪ್ರಧಾನವಾಗಿ ಕಾಣುತ್ತದೆ. ಎಲ್ಲಿ ನೋವು? ಎಂಬುದನ್ನು ತಿಳಿಸಲು 'ನೋವು' ಪದಕ್ಕೆ 'ತಲೆಯಲ್ಲಿ' ಎಂಬುದು ಹಿಂದುಗಡೆ ಬಂದಿದೆ.

ಉದಾ: ದೇವರ + ಮಂದಿರ = ದೇವಮಂದಿರ
ಹಗಲಿನಲ್ಲಿ + ಕನಸು = ಹಗಲುಗನಸು
ಕಣ್ಣಿನಲ್ಲಿ + ಉರಿ = ಕಣ್ಣುರಿ
ಅರಸನ + ಗಿಣಿ = ಅರಗಿಣಿ
ಸಾಲದ + ಮೇಳ = ಸಾಲಮೇಳ
ಬೆಟ್ಟದ + ತಾವರೆ = ಬೆಟ್ಟದಾವರೆ
ಬಳೆಗೆ + ಚಿನ್ನ = ಬಳೆಚಿನ್ನ
ಸಂಜೆಯ + ಕೆಂಪು = ಸಂಜೆಗೆಂಪು
ಹರಟೆಯಲ್ಲಿ + ಮಲ್ಲ = ಹರಟೆಮಲ್ಲ

**2) ದ್ವಿಗು ಸಮಾಸ:–**

ಇಲ್ಲಿ ಉತ್ತರ ಪದದ ಅರ್ಥವೇ ಪ್ರಧಾನ. ಪೂರ್ವ ಪದವು ಸಂಖ್ಯಾವಾಚಕವಾಗಿದ್ದು ಪರ ಪದವು ನಾಮಚಾಚಕವಾಗಿದ್ದಲ್ಲಿ (ಇಲ್ಲಿಯೂ ಪರ ಪದದ ಅಥವೇ ಪ್ರಧಾನ) ಆದ್ದರಿಂದ ಇದನ್ನು ದ್ವಿಗು ಸಮಾಸ ಎನ್ನುವರು.

**ಉದಾ:** ಒಂದು + ಕಣ್ಣು = ಒಕ್ಕಣ್ಣು
ಎರಡು + ಮಡಿ = ಇಮ್ಮಡಿ
ಮೂರು + ಮಡಿ = ಮುಮ್ಮಡಿ
ನವ + ರಾತ್ರಿ = ನವರಾತ್ರಿ
ಪಂಚ + ಇಂದ್ರಿಯ = ಪಂಚೇಂದ್ರಿಯ
ಸಪ್ತ + ಸ್ವರಗಳು = ಸಪ್ತಸ್ವರಗಳು
ಮೂರು + ಗಾವುದ = ಮೂಗಾವುದ
ಅಷ್ಟ + ದಿಕ್ಕುಗಳು = ಅಷ್ಟದಿಕ್ಕುಗಳು
ನಾಲ್ಕು + ಮಡಿ = ನಾಲ್ವಡಿ
ಎರೆಡು + ತಂಡ = ಇತ್ತಂಡ
ದಶ + ಮುಖ = ದಶಮುಖ
ಎರಡು + ಕೆಲ = ಇಕ್ಕೆಲ

**3) ಕರ್ಮಧಾರೆಯ ಸಮಾಸ:–**

ವಿಶೇಷಣ–ವಿಶೇಷ್ಯಾ ಸಂಬಂಧಿದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರೆಯ ಸಮಾಸ.

ವಿಶೇಷಣ–ವರ್ಣಿಸುವ ಪದ

ವಿಶೇಷ್ಯಾ–ವರ್ಣಿಸಿಕೊಳ್ಳುವ ಪದ

ಕರ್ಮಧಾರೆಯ ಸಮಾಸದಲ್ಲಿ ಪೂರ್ವಪದವು ವಿಶೇಷಣವಾಗಿದ್ದು, ಉತ್ತರ ಪದವು ವಿಶೇಷ್ಯಾವಾಗಿರುತ್ತದೆ.

ಉದಾ: ಹಿರಿದು + ಮರ = ಹೆಮ್ಮರ

ಇಲ್ಲಿ 'ಹಿರಿದು' ಎಂಬುದು ವಿಶೇಷಣ, 'ಮರ' ಎಂಬುದು ವಿಶೇಷ್ಯ.

**ಉದಾ:** ಕರಿದು + ಕೊರಳು = ಕರಿಗೊರಳು
ಹೊಸತು + ಕನ್ನಡ = ಹೊಸಗನ್ನಡ
ಇನಿತು + ಮಾವು = ಇಮ್ಮಾವು
ಮೆಲ್ಲಿತು + ಮಾತು = ಮೆಲ್ವಾತು
ಬಿಳಿತು + ಕೊಡೆ = ಬೆಳ್ಗೊಡೆ
ಹಿರಿದು + ಜೇನು = ಹೆಜ್ಜೇನು
ಹೊನ್ನಿನ + ಬಿಸಿಲು = ಹೊಂಬಿಸಿಲು
ಹಿರಿದು + ಬೆರಳು = ಹೆಬ್ಬೆರಳು

**4) ದ್ವಂದ್ವ ಸಮಾಸ:–**

ಎರಡು ಅಥವಾ ಅನೇಕ ಪದಗಳು ಸೇರಿ ಸಮಾಸವಾದಾಗ ಆ ಎಲ್ಲಾ ಪದಗಳು ಮುಖ್ಯವಾಗಿದ್ದರೆ ಅದು ದ್ವಂದ್ವ ಸಮಾಸ.

ದ್ವಂದ್ವ ಸಮಾಸದಲ್ಲಿ ಎರಡು ಅಥವಾ ಹೆಚ್ಚು ನಾಮಪದಗಳು ಒಂದಕ್ಕೊಂದು ಸಹಯೋಗ ತೋರುವಂತೆ ಸೇರುತ್ತವೆ. ಹಾಗೆ ಸೇರುವ ಎಲ್ಲಾ ನಾಮದಪಗಳ ಅರ್ಥವು ಪ್ರಧಾನವಾಗಿರುತ್ತದೆ.

ಉದಾ: ಗಿರಿಯೂ+ವನವೂ+ದುರ್ಗವೂ=ಗಿರಿವನದುರ್ಗಗಳು
ಕರಿಯೂ+ತುರುಗವೂ+ರಥವೂ=ಕರಿತುರುಗರಥ

downloaded from: www.kpscvaani.com


ಗುಡುಗು + ಸಿಡಿಲೂ + ಮಿಂಚೂ
=ಗುಡುಗುಸಿಡಿಲುಮಿಂಚು
ಧನವೂ + ಧಾನ್ಯವೂ = ಧನಧಾನ್ಯವೂ
ಕೃಷ್ಣನೂ + ಅರ್ಜುನನೂ = ಕೃಷ್ಣಾರ್ಜುನರೂ
ಆನೆಯೂ + ಕುದುರೆಯೂ + ಒಂಟೆಯೂ =
ಆನೆಕುದುರೆಒಂಟೆ
ಹಣ್ಣು + ಕಾಯಿಯೂ + ಹೂವು = ಹಣ್ಣುಕಾಯಿಹೂವು
ಕಸವೂ + ಕಡ್ಡಿಯೂ = ಕಸಕಡ್ಡಿ
ಮರವೂ + ಗಿಡವೂ + ಬಳ್ಳಿಯೂ = ಗಿಡಮರಬಳ್ಳಿ
ಆಟ + ಪಾಠ + ಕೂಟವೂ = ಆಟಪಾಠಕೂಟ

**5) ಅಂಶಿ ಸಮಾಸ:–**

ಪೂರ್ವ ಮತ್ತು ಉತ್ತರಪದಗಳು ಅಂಶಾಂಶಿಭಾವ ಸಂಬಂಧದಿಂದ ಕೂಡಿದ್ದು ಪೂರ್ವಪದದ ಅರ್ಥವು ಪ್ರಧಾನವಾಗಿದ್ದರೆ ಅದು ಅಂಶಿ ಸಮಾಸ.
ಅಂದರೆ ಪೂರ್ವಪದವು ಅಂಶವಾಚಕವಾಗಿರುತ್ತದೆ. ಮತ್ತು ಉತ್ತರಪದವು ಅಂಶಿವಾಚಕವಾಗಿರುತ್ತದೆ.

**ಉದಾ:** ಕೈಯ + ಅಡಿ = ಅಂಗೈ
ತಲೆಯ + ಹಿಂದು = ಹಿಂದಲೆ
ಕಾಲಿನ + ಅಡಿ = ಅಂಗಾಲು
ಕೈಯ + ಮುಂದು = ಮುಂಗೈ
ತುಟಿಯ + ಕೆಳಗು = ಕೆಳದುಟಿ
ಕಾರಿನ + ಮುಂದು = ಮುಂಗಾರು
ಇರುಳಿನ + ನಡು = ನಟ್ಟಿರುಳು
ಬಾಗಿಲ + ಮುಂದು = ಮುಂಬಾಗಿಲು
ನಾಲಿಗೆಯ + ತುದಿ = ತುದಿನಾಲಗೆ
ಕೆಳಗೆ + ಹೊಟ್ಟೆ = ಕಿಬ್ಬೊಟ್ಟೆ
ಕಣ್ಣ + ಕಡೆ = ಕಡೆಗಣ್ಣು

**6) ಬಹುವ್ರೀಹಿ ಸಮಾಸ:–**

ಎರಡು ಪದಗಳ ಅರ್ಥ ಮುಖ್ಯವಾಗದೇ ಬೇರೊಂದು ಪದದ ಅರ್ಥ ಮುಖ್ಯವಾದರೆ ಅದನ್ನೇ ಬಹುವ್ರೀಹಿ ಸಮಾಸ ಎಂದು ಕರೆಯುತ್ತಾರೆ.
ಉದಾ: ಹಣೆಯಲ್ಲಿ + ಕಣ್ಣುಳ್ಳವನು = ಹಣೆಗಣ್ಣ (ಶಿವ)
ಇಲ್ಲಿ 'ಹಣೆಯಲ್ಲಿ' ಮತ್ತು 'ಕಣ್ಣುಳ್ಳವನು' ಎಂಬ ಪದಗಳು ಸೇರಿ ಆಗಿರುವ 'ಹಣೆಗಣ್ಣ' ಎಂಬ ಪದವು ಬೇರೊಂದು ಅರ್ಥ ಸೂಚಿಸುತ್ತದೆ.
'ಹಣೆಗಣ್ಣ' ಎಂಬುದು 'ಶಿವ' ನ ಹೆಸರು.

**ಉದಾ:** ಮೂರು + ಕಣ್ಣುಳ್ಳವನು = ಮುಕ್ಕಣ್ಣ (ಶಿವ)
ಸೂರ್ಯನ + ಪುತ್ರನು = ಸೂರ್ಯಪುತ್ರ (ಕರ್ಣ)
ನಾಲ್ಕು + ಮೊಗವುಳ್ಳವನು = ನಾಲ್ಮೊಗ (ಬ್ರಹ್ಮ)
ಚಕ್ರವೂ + ಪಾಣಿಯಲ್ಲಿ = ಚಕ್ರಪಾಣಿ (ವಿಷ್ಣು)
ಓರೆಯಾದ + ಕಣ್ಣುಳ್ಳವನು = ಓರೆಗಣ್ಣ
ನಿಡಿದು + ಮೂಗಿ = ನಿಡುಮೂಗಿ
ಪದ್ಮವನ್ನು + ನಾಭಿಯಲ್ಲಿ ಉಳ್ಳವ = ಪದ್ಮನಾಭ (ವಿಷ್ಣು)

**7) ಕ್ರಿಯಾ ಸಮಾಸ:–**

ಪೂರ್ವಪದವು ಹೆಚ್ಚಿನ ಸಂದರ್ಭಗಳಲ್ಲಿ ದ್ವತೀಯಾ ವಿಭಕ್ತಿ ಪ್ರತ್ಯಯದಿಂದ (ಅನ್ನು) ಕೂಡಿದ್ದು, ಉತ್ತರ ಪದದಲ್ಲಿನ ಕ್ರಿಯೆಯೊಡನೆ ಸೇರಿ ಆಗುವ ಸಮಾಸವೇ 'ಕ್ರಿಯಾಸಮಾಸ' ಉತ್ತರ ಪದವು 'ಕ್ರಿಯಾಪದ' ಅಥವಾ 'ಕೃದಂತ'ವಾಗಿರುತ್ತದೆ.

**ಉದಾ:** ಮೈಯನ್ನು + ಮುಚ್ಚು = ಮೈಮುಚ್ಚು
ಮಾನ್ಯವನ್ನು + ಮಾಡು = ಮಾನ್ಯಮಾಡು
ರೈಲನ್ನು + ಬಿಡು = ರೈಲುಬಿಡು
ವಿಷವನ್ನು + ಕಾರು = ವಿಷಕಾರು
ಕಾಲನ್ನು + ತೆಗೆ = ಕಾಲ್ತೆಗೆ
ನೀರನ್ನು + ಉಣಿಸು = ನೀರುಣಿಸು
ನೀರಿನಿಂದ + ಕೂಡಿ = ನೀರ್ಗುಡಿ
ತಲೆಯನ್ನು + ತೆಗೆದನು = ತಲೆ ತೆಗೆದನು
ಮಣೆಯನ್ನು + ಇತ್ತು = ಮಣೆಯಿತ್ತು
ಕಣ್ಣಂ + ತೆರೆ = ಕಣ್ದೆರೆ
ಕಣ್ಣಿನಿಂದ + ಕೆಡು = ಕಂಗೆಡು
ಹಿಂದಕ್ಕೆ + ಸರಿದು = ಹಿಂಜರಿದು ಇತ್ಯಾದಿ

**8) ಗಮಕ ಸಮಾಸ**

ಪೂರ್ವಪದವು ಸರ್ವನಾಮ ಅಥವಾ ಕೃದಂತವಾಗಿದ್ದು, ಉತ್ತರ ಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ಗಮಕ ಸಮಾಸ.
ಉದಾ: ಪೂರ್ವಪದ ಸರ್ವನಾಮ ಆಗಿದ್ದಾಗ (ಸರ್ವನಾಮ + ನಾಮಪದ)
ಅದು + ಕಲ್ಲು = ಆ ಕಲ್ಲು
ಇದು + ಬೆಕ್ಕು = ಈ ಬೆಕ್ಕು
ಇದು + ಪರಿವಾರ = ಈ ಪರಿವಾರ
ಇದು + ಮನೆ = ಈ ಮನೆ
ನೇಯ್ದುದು + ವಸ್ತ್ರ = ನೆಯ್ದುವಸ್ತ್ರ
ಅವನು + ಹುಡುಗ = ಆ ಹುಡುಗ
ಪೂರ್ವಪದವು 'ಕೃದಂತ' ಆಗಿದ್ದಾಗ (ಕೃದಂತ+ನಾಮಪದ)
ಸಿಡಿಯುವುದು + ಮದ್ದು = ಸಿಡಿಮದ್ದು
ಉರಿದುದು + ಕಡಲೆ = ಉರಿಗಡಲೆ
ತೂಗುವುದು + ತೊಟ್ಟಿಲು = ತೂಗುತೊಟ್ಟಿಲು
ಉಡುವುದು + ದಾರ = ಉಡುದಾರ

**ಅರಿಸಮಾಸ:–**

ಸಮಾಸದಲ್ಲಿನ ಒಂದು ದೋಷವೇ ಅರಿಸಮಾಸ.


*www.iasjnana.com* *9916399276*

downloaded from: www.kpscvaani.com


ಸಂಸ್ಕೃತ ಮತ್ತು ಕನ್ನಡ ಪದಗಳ ಮಿಶ್ರಿತಕ್ಕೆ ಅರಿಸಮಾಸ ಎನ್ನುವರು.
ಪೂರ್ವ ಮತ್ತು ಉತ್ತರ ಪದಗಳು ಬೇರೆ–ಬೇರೆ ಭಾಷೆಯ ಪದಗಳಾಗಿದ್ದು ಸಮಾಸವಾದರೆ ಅದು ಸಮಾಸ ದೋಷ. ಅದನ್ನು ಅರಿಸಮಾಸ ಎನ್ನಲಾಗಿದೆ.

**ಉದಾ:** ಕ.ಪದ) (ಸಂ.ಪದ)
ಅರಸು ಕುಮಾರ
ಮಂಗಳಾರತಿ
ಕಮಲ ನೇತ್ರ
ಕಡುರಾಗ
ಗೆಳತಿ ಸಮೇತ
ಇರ್ಬಲ
ಕಡುದರ್ಪಂ ಇತ್ಯಾದಿ.

## 10. ಸಾಧಿತ ಶಬ್ದಗಳು

‘ಧಾತು’ಗಳಿಗೆ ಮತ್ತು ‘ನಾಮಕೃತಿ’ಗಳಿಗೆ ವಿವಿಧ ಪ್ರತ್ಯಯಗಳನ್ನು ಸೇರಿಸಿ ಹೊಸ ಶಬ್ದಗಳನ್ನು ರಚಿಸಬಹುದು. ಈ ಶಬ್ದಗಳೇ ‘ಸಾಧಿತ ಶಬ್ದ’ಗಳು.

**1) ಕೃದಂತ ಪದಗಳು:–**

ಧಾತುಗಳಿಗೆ ಕೃತ್‌ಪ್ರತ್ಯಯಗಳು ಸೇರಿದರೆ ಕೃದಂತ ಪದಗಳಾಗುತ್ತವೆ.
ಧಾತು + ಕೃತ್ ಪ್ರತ್ಯಯ = ಕೃದಂತ
ಧಾತುಗಳ ಮುಂದೆ ಸೇರಿಸಲ್ಪಡುವ ಪ್ರತ್ಯಯಗಳನ್ನು ಕೃತ್ ಪ್ರತ್ಯಯಗಳೆನ್ನುವರು.

**ಉದಾ:** ಹಾಡು + ಉತ್ತ = ಹಾಡುತ್ತ
ಓದಲು + ಇಕ್ಕೆ = ಓದಲಿಕ್ಕೆ
ನೋಡುವ, ತಿಂದು, ಹೋಗಲು, ಬಂದರೆ, ಹೊರಟ ಇತ್ಯಾದಿ.

ಮೇಲಿನ ಕೃದಂತ ಪದಗಳನ್ನು ಗಮನಿಸಿದಾಗ ಅವುಗಳನ್ನು ಕ್ರಿಯಾಪದಗಳಂತೆ ಪೂರ್ಣ ಕ್ರಿಯೆಯನ್ನು ತಿಳಿಸದೆ ಅಪೂರ್ಣ ಕ್ರಿಯೆಯನ್ನು ತಿಳಿಸುತ್ತಿರುವುದನ್ನು ಕಾಣಬಹುದು.

**ಉದಾ:** ಅವನು ತಿನ್ನುತ್ತ ಟಿವಿ ನೋಡಿದನು.

**ಕೃದಂತನಾಮ:**

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿದಾಗ ಆಗುವ ನಾಮಗಳನ್ನು ‘ಕೃದಂತನಾಮ’ ಅಥವಾ ‘ಕೃನ್ನಾಮ’ ಎನ್ನುವರು.

**ಉದಾ:**
ಅಲ್ಲಿಗೆ ಹೋದವರಿಗೆ ಏನೂ ಸಿಗಲಿಲ್ಲ.
ನಡೆಯುವನು ಮುಂದಕ್ಕೆ ಹೋಗುತ್ತಿರುತ್ತಾನೆ.
ಆಡಿಯೂ ಮಾಡದವನು ಅಧಮನು.
ನಗುವವಳು ನಗಲಿ, ನಾವು ಮುಂದಕ್ಕೆ ಹೋಗೋಣ.
ಆಕಾಶದಲ್ಲಿ ಹಾರಾಡುವ ಹಕ್ಕಿಗಳು.

ಮೇಲಿನ ವಾಕ್ಯಗಳಲ್ಲಿನ ಹೋದವರಿಗೆ, ನಡೆಯುವನು, ಮಾಡದವನು, ನಗುವವಳು, ಹಾರಾಡುವ ಎಂಬ ಪದಗಳು ಆ ಕ್ರಿಯೆಗೆ ಸಂಬಂಧಪಟ್ಟವರನ್ನು ಸೂಚಿಸುತ್ತವೆ. ಈ ಪದಗಳು ಕ್ರಿಯೆಗೆ ಸಂಬಂಧಪಟ್ಟವರ ಹೆಸರುಗಳಾಗಿ ನಿಲ್ಲುವುದರಿಂದ ನಾಮಪದಗಳು ಎನಿಸಿಕೊಳ್ಳುತ್ತವೆ. ಇಂತಹ ಶಬ್ದಗಳನ್ನು ‘ಕೃದಂತನಾಮ’ಗಳೆನ್ನುವರು.

**ಉದಾ:** ವರ್ತಮಾನ ಕೃದಂತಗಳು
ಬರೆ + ಉವ = ಬರೆಯುವ
ನಡೆ + ಉವ = ನಡೆಯುವ
ಮಾಡು + ಉದು = ಮಾಡುವುದು

**ಭೂತ ಕೃದಂತಗಳು**
ತಿನ್ನು + ಇದ = ತಿಂದ
ಮಾಡು + ಇದ = ಮಾಡಿದ

**ನಿಷೇಧ ಕೃದಂತ**
ಮಾಡು + ಅದ = ಮಾಡದ
ಹೋಗು + ಅದ = ಹೋಗದ

ಇಂತಹ ಕೃದಂತಗಳಿಗೆ ಅವನು, ಅವಳು, ಅವರು, ಅದು, ಅವು, ಉದು, ಉವು ಎಂಬ ಪದಗಳು ಸೇರಿ ‘ಕೃದಂತನಾಮ’ ಗಳಾಗುತ್ತವೆ.

**ಕೃದಂತ ಭಾವನಾಮ:**

ಧಾತುಗಳ ಮುಂದೆ ಕೃತ್ ಪ್ರತ್ಯಯಗಳು ಸೇರಿದಾಗ ಉಂಟಾಗುವ ಭಾವನಾಮಗಳೇ ಕೃದಂತ ಭಾವನಾಮಗಳು.

**ಉದಾ:** ಆಡು + ಟ = ಆಟ ಇಲ್ಲಿ ‘ಆಡು’ ಎಂಬ ಧಾತುವಿಗೆ ‘ಟ’ ಪ್ರತ್ಯಯ ಸೇರಿ ‘ಆಟ’ ಎನ್ನುವ ಭಾವನಾಮ ಬಂದಿದೆ.

ವಿವಿಧ ಕೃತ್ ಪ್ರತ್ಯಯಗಳು ಧಾತುಗಳಿಗೆ ಸೇರಿ ಕೃದಂತ ಭಾವನಾಮಗಳು ಉಂಟಾಗುತ್ತವೆ.

| ಕ್ರ.ಸಂ. | ಪ್ರತ್ಯಯ | ಕೃದಂತ ಭಾವನಾಮ |
|---|---|---|
| 1 | ಇಗೆ | ಹೆರಿಗೆ (ಹೆರು+ಇಗೆ)<br>ಹಾಸಿಗೆ (ಹಾಸು+ಇಗೆ) |
| 2 | ಇಕೆ | ನಂಬಿಕೆ (ನಂಬು+ಇಕೆ) |
| 3 | ಗೆ | ಉಡುಗೆ (ಉಡು+ಗೆ) |
| 4 | ತ | ನೆಗೆತ, ಕುಣಿತ, ಸೆಳೆತ |
| 5 | ಟ | ಆಟ, ನೋಟ, ಕಾಟ, ಮಾಟ |
| 6 | ಅವು | ಸೆಳವು, ಒಲವು, ಗೆಲುವು |
| 7 | ಅತೆ | ಅಳತೆ, ನಡತೆ, ಕೊರತೆ |

downloaded from: www.kpscvaani.com


| | | |
|---|---|---|
| 8 | ಎ | ಕೊಲೆ, ಹೊರೆ, ನಗೆ |
| 9 | ವಳಿ | ನಡಾವಳಿ, ನಿಲುವಳಿ, ಹಿಡುವಳಿ |
| 10 | ವು | ಸಾವು, ನೋವು, ಅರಿವು |
| 11 | ಅಪು | ನೆನಪು, ಹೊಳಪು |

ಕೆಲವು ಧಾತುಗಳ ಸ್ವರೂಪದಲ್ಲಿಯೇ ಕೃದಂತ ಭಾವನಾಮಗಳಾಗಿರುತ್ತವೆ.
**ಉದಾ:** ಓದು, ಬದುಕು, ಹುಟ್ಟು, ನಡೆ, ನುಡಿ, ಸವಿ ಇತ್ಯಾದಿ

ಕೃದಂತನಾಮಗಳನ್ನು ವಿಶೇಷಣಗಳಂತೆ ಉಪಯೋಗಿಸಿದರೆ ಅವು ಕೃದಂತ ವಿಶೇಷಣಗಳೆನಿಸುತ್ತವೆ. (ವಿಶೇಷಣ ಎಂದರೆ ವರ್ಣಿಸುವ ಶಬ್ದ)
ಉದಾ:
ಕಾಣದ ಕಡಲು
ಆಲಿಸಿದ ಹಾಡು
ಹಾರುವ ಚಿಟ್ಟೆ
ಓಡುವ ಕಾಲ

**ಕೃದಂತ ವಿಶೇಷಣ:**

ಕೃದಂತನಾಮಗಳನ್ನು ವಿಶೇಷಣಗಳಂತೆ ಉಪಯೋಗಿಸಿದರೆ ಅವು ಕೃದಂತ ವಿಶೇಷಣಗಳೆನಿಸುತ್ತವೆ. (ವಿಶೇಷಣ ಎಂದರೆ ವರ್ಣಿಸುವ ಶಬ್ದ)
**ಉದಾ:** ಕಾಣದ ಕಡಲು
ಆಲಿಸಿದ ಹಾಡು
ಹಾರುವ ಚಿಟ್ಟೆ
ಓಡುವ ಕಾಲ

**2) ತದ್ಧಿತ ಪದಗಳು/ತದ್ಧಿತಾಂತಗಳು:–**
ನಾಮಪದಗಳಿಗೆ ತದ್ಧಿತ ಪ್ರತ್ಯಯಗಳು ಸೇರಿ ಉಂಟಾಗುವ ಪದಗಳಿಗೆ 'ತದ್ಧಿತ ಪದಗಳು' ಎನ್ನುವರು.

**ತದ್ಧಿತಾಂತನಾಮ:**
ನಾಮಪದಗಳಿಗೆ ಕಾರ, ಗಾರ, ಇಗ, ವಂತ, ಅಡಿಗ, ಗಿತ್ತಿ ಮೊದಲಾದ ಪ್ರತ್ಯಯಗಳು ಸೇರಿ 'ತದ್ಧಿತಾಂತನಾಮ' ಗಳು ಉಂಟಾಗುತ್ತವೆ.
**ಉದಾ:** ಕೂಲಿಕಾರ, ಮೋಸಗಾರ, ಹೂವಾಡಿಗ, ಗುಣವಂತ, ಕನ್ನಡಿಗ, ಒಕ್ಕಲಗಿತ್ತಿ ಇತ್ಯಾದಿ.

| ಕ್ರ.ಸಂ. | ತದ್ಧಿತ ಪ್ರತ್ಯಯಗಳು | ತದ್ಧಿತಾಂತನಾಮಗಳು |
|---|---|---|
| 1 | ವಂತ | ಬುದ್ಧಿವಂತ, ಹಣವಂತ, ಸಿರಿವಂತ, ಗುಣವಂತ |
| 2 | ಇಗ | ಗಾರುಡಿಗ, ಗಾಣಿಗ, ಸಂಪಿಗ |
| 3 | ಕಾರ | ಅಂಗಡಿಕಾರ, ಓಲೆಕಾರ |
| 4 | ಗಾರ | ಆಟಗಾರ, ಸಾಲಗಾರ, ಬಳೆಗಾರ |
| 5 | ಸ್ತ/ಸ್ಥ | ನಂಬಿಗಸ್ತ, ಗೃಹಸ್ಥ, ವ್ಯಾಪಾರಸ್ಥ |
| 6 | ಅಡಿಗ | ಹಾವಾಡಿಗ, ದೇವಾಡಿಗ |
| 7 | ಗಾತಿ | ಆಟಗಾತಿ, ಓಟಗಾತಿ, ಮಾಯಗಾತಿ |
| 8 | ಇತ್ತಿ | ಹೂವಾಡಗಿತ್ತಿ, ಅಗಸಗಿತ್ತಿ |
| 9 | ತಿ | ಗೌಡತಿ, ಗೊಲ್ಲತಿ |
| 10 | ಗುಳಿ | ಲಂಚಗುಳಿ, ಮರೆಗುಳಿ |
| 11 | ಇ | ಅರಸಿ, ಕುರುಡಿ, ಮುದುಕಿ |

downloaded from: www.kpscvaani.com


**ತದ್ಧಿತಾಂತ ಭಾವನಾಮ:**

ನಾಮಪ್ರಕೃತಿಗಳ ಜೊತೆ ತನ, ಇಕೆ, ಉ, ಪು ಮೊದಲಾದ ಭಾವವಾಚಕ ತದ್ಧಿತ ಪ್ರತ್ಯಯಗಳು ಸೇರಿಸಿದಾಗ 'ತದ್ಧಿತ ಭಾವನಾಮ'ಗಳಾಗುತ್ತವೆ.

**ಉದಾ:** ಜಾಣ + ತನ = ಜಾಣತನ

'ಜಾಣತನ' ಎಂಬ ಪದವು ಜಾಣನ ಭಾವವನ್ನು ಸೂಚಿಸುತ್ತದೆ.

| ಸಂಖ್ಯೆ | ತದ್ಧಿ ಪ್ರತ್ಯಯ | ತದ್ಧಿತ ಭಾವನಾಮಗಳು |
|---|---|---|
| 1 | ಮೆ | ಜಾಣ್ಮೆ, ಹಿರಿಮೆ, ಗರಿಮೆ, ಹೆಮ್ಮೆ, ಒಲುಮೆ |
| 2 | ಇಕೆ | ಗೌಡಿಕೆ, ದೊಡ್ಡಸ್ತಿಕೆ, ಬುದ್ಧಿವಂತಿಕೆ |
| 3 | ಉ | ಕುರುಡು, ಕಿವುಡು |
| 4 | ತನ | ದೊಡ್ಡತನ, ಸಣ್ಣತನ, ಒಳ್ಳೆಯತನ |
| 5 | ಪು | ಬಿಳುಪು, ಕೆಂಪು, ತಂಪು, ಕಂಪು |
| 6 | ವಳಿ | ಗೊತ್ತುವಳಿ, ನಿಲುವಳಿ, ಭವಾವಳಿ |

## 11. ಅವ್ಯಯ ಪದಗಳು

ಲಿಂಗ, ವಚನ, ವಿಭಕ್ತಿಗಳ ವಿಕಾರವಿಲ್ಲದೆ ಒಂದೇ ರೂಪದಲ್ಲಿರುವ ಶಬ್ದಗಳನ್ನು 'ಅವ್ಯಯ ಪದಗಳು' ಎನ್ನುವರು. ಅಂದರೆ ಅವ್ಯಯ ಪದಗಳು ವಿಭಕ್ತಿ ಪ್ರತ್ಯಯಗಳನ್ನು ಲಿಂಗ, ವಚನಗಳನ್ನು ಹೊಂದಿರುವುದಿಲ್ಲ.

**ಅವ್ಯಯಗಳಲ್ಲಿ 8 ವಿಧ**

1) ಸಾಮಾನ್ಯಾವ್ಯಯ
2) ಅನುಕರಣಾವ್ಯಯ
3) ಭಾವಸೂಚಕಾವ್ಯಯ
4) ಕ್ರಿಯಾರ್ಥಕಾವ್ಯಯ
5) ಸಂಬಂಧಾರ್ಥಕಾವ್ಯಯ
6) ಕೃದಂತಾವ್ಯಯ
7) ತದ್ಧಿತಾಂತಾವ್ಯಯ
8) ಅವಧಾರಣಾರ್ಥಕಾವ್ಯಯ

**1) ಸಾಮಾನ್ಯಾವ್ಯಯ:**

ಕ್ರಿಯೆಯ ಕಾಲ, ಸ್ಥಾನ, ರೀತಿ ಮೊದಲಾದುವನ್ನು ತಿಳಿಸುವ ಶಬ್ದಗಳನ್ನು ಸಾಮಾನ್ಯವ್ಯಯಗಳೆನ್ನುತ್ತಾರೆ. ಇವು ಕ್ರಿಯಾಪದಕ್ಕೆ ವಿಸೇಷಣಗಳಾಗುತ್ತವೆ. (ಕ್ರಿಯಾ ವಿಶೇಷಣ)

ಉದಾ: ಅವನು ಆಮೇಲೆ ಬರುವನು (ಕಾಲ)
ಅದು ಅತ್ತ ಹೋಯಿತು (ಸ್ಥಾನ)
ಅವಳು ಚೆನ್ನಾಗಿ ಹಾಡುತ್ತಾಳೆ (ರೀತಿ)

ನೆಟ್ಟಗೆ, ತಟ್ಟನೆ, ಬಿಮ್ಮನೆ, ಸುಮ್ಮನೆ, ಸುಮ್ಮಗೆ, ಕಮ್ಮಗೆ, ಬೇಗನೆ, ಮೆಲ್ಲಗೆ, ಸೊಗಸಾಗಿ, ಹಾಗೆ, ಹೀಗೆ, ಅಂತು, ಇಂತು, ಬೇರೆ, ಬಳಿಕ, ತರುವಾಯ, ಒಡವೆ, ಬೀಗ, ಸುತ್ತಲು ಇತ್ಯಾದಿ

**2) ಅನುಕರಣಾವ್ಯಯಗಳು:**

**ಉದಾ:** ಬೆಂಕಿಯು ಧಗಧಗ ಉರಿಯಿತು
ಕವಣೆಯ ಕಲ್ಲು ರೊಯ್ಯನೆ ಹಾರಿತು
ಹಂದಿಯು ದಡದಡ ಓಡಿತು

ಧಗಧಗ, ರೊಯ್ಯನೆ, ದಡದಡ ಇಂಥವು ಅರ್ಥವಿಲ್ಲದ ಧ್ವನಿ ವಿಶೇಷಣಗಳಾಗಿವೆ. ತಾನು ಕೇಳಿದ ಧ್ವನಿಗಳನ್ನು ಅನುಕರಣೆ ಮಾಡಿ ಹೇಳಿದ ಶಬ್ದಗಳಾಗಿವೆ.

ಹೀಗೆ ಅರ್ಥವಿಲ್ಲದ ತಾನು ಕೇಳಿದ ಯಾವುದೇ ಧ್ವನಿಯನ್ನು ಅನುಕರಿಸುವ ಶಬ್ದಗಳೇ ಅನುಕರಣಾವ್ಯಯಗಳು.

**ಉದಾ:** ಪಟಪಟ, ಚಟಚಟ, ಕರಕರ, ಗುಡುಗುಡು

**3) ಭಾವಸೂಚಕಾವ್ಯಯಗಳು:**

ಮನಸ್ಸಿನಲ್ಲಿ ಹುಟ್ಟುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ ಮೊದಲಾದವನ್ನು ವ್ಯಕ್ತಪಡಿಸಲು ಕೆಲವು ಅರ್ಥವಿಲ್ಲದ ಶಬ್ದಗಳನ್ನು ಬಳಸಲಾಗುತ್ತದೆ. ಇಂಥವನ್ನು 'ಭಾವಸೂಚಕಾವ್ಯಯ'ಗಳೆನ್ನುತ್ತಾರೆ. ಇವಕ್ಕೆ ('ನಿಪಾತಾವ್ಯಯ'ಗಳೆಂದು ಸಹ ಕರೆಯುವರು)

**ಉದಾ:** ಓಹೋ! ಅವನು ಅಂಥವನೇನು!
ಅಬ್ಬಾ! ಅಷ್ಟು ದೊಡ್ಡ ಹಾವು!
ಅಯ್ಯೋ! ಎಂಥ ಕಷ್ಟ ಬಂತು

ಎಲ್ಲಾ, ಅಯ್ಯೋ, ಅಕ್ಕಟಾ, ಅಕಟಕಟಾ, ಆಹಾ, ಭಲೇ, ಭಲಾ, ಭಳಿರೇ, ಛೇ, ಥೂ, ಅಬ್ಬಾ, ಅಹಹಾ, ಓಹೋ, ಎಲೆಲಾ ಇತ್ಯಾದಿ

**4) ಕ್ರಿಯಾರ್ಥಕಾವ್ಯಯಗಳು:**

ಕ್ರಿಯಾಪದ ಸ್ಥಾನದಲ್ಲಿ ನಿಂತು ವಾಕ್ಯದ ಅರ್ಥವನ್ನು ಪೂರ್ಣ ಮಾಡುವ ಶಬ್ದಗಳಿಗೆ ಕ್ರಿಯಾರ್ಥಕಾವ್ಯಯಗಳೆನ್ನುತ್ತಾರೆ.

**ಉದಾ:** ನನಗೆ ಲಾಭ ಬೇಡ.
ಹಕ್ಕಿಗಳಲ್ಲಿ ನಾನಾ ವಿಧಗಳುಂಟು.
ಗದ್ದೆಗೆ ಇನ್ನಷ್ಟು ಗೊಬ್ಬರ ಬೇಕು.
ಅವನಿಗೆ ಕರುಣೆಯೆಂಬುದೇ ಇಲ್ಲ.

ಉಂಟು, ಬೇಕು, ಬೇಡ, ಇಲ್ಲ, ಅಹುದು, ಹೌದು, ಸಾಕು, ಇಲ್ಲ ಇತ್ಯಾದಿ

downloaded from: www.kpscvaani.com


**5) ಸಂಬಂಧಾರ್ಥಕಾವ್ಯಯಗಳು:**

ಈ ಮಾತ್ರೆಯನ್ನು ಅಥವಾ ಆ ಕಷಾಯವನ್ನು ಸೇವಿಸಿ. ಎರಡು ಪದಗಳನ್ನೋ ಪದ ಸಮುಚ್ಚಯಗಳನ್ನೋ ವಾಕ್ಯಗಳನ್ನೋ ಜೋಡಿಸಲು ಬಳಸುವಂಥ ಶಬ್ದಗಳನ್ನು ಸಂಬಂಧಾರ್ಥಕಾವ್ಯಯಗಳೆನ್ನುತ್ತಾರೆ.

**ಉದಾ:** ರಾಮನೂ, ಲಕ್ಷ್ಮಣನೂ, ಸೀತೆಯೂ ಕಾಡಿಗೆ ಹೋದರು.

ಹೆಚ್ಚು ಮಳೆಯಾದುದರಿಂದ ಊರು ಕೊಚ್ಚಿಹೋಯಿತು.

ಅವನನ್ನು ಕರೆದೆ ಆದರೆ ಅವನು ಬರಲಿಲ್ಲ.

ಊ, ಊಂ, ಮತ್ತು, ಅಥವಾ, ಆದರೆ, ಆದ್ದರಿಂದ, ಅಲ್ಲದೆ ಇತ್ಯಾದಿ

**6) ಕೃದಂತಾವ್ಯಯಗಳು:**

ಧಾತುಗಳ ಮೇಲೆ ಉತ, ಉತ್ತ, ಅದೆ, ದರೆ, ಅಲು, ಅಲಿಕ್ಕೆ, ಅ, ಇ, ದು, ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಯಗಳಾಗುತ್ತವೆ. ಹೋಗಲು, ಹೇಳುತ್ತೆ, ಕೇಳದೆ, ಹೇಳದೆ ಇತ್ಯಾದಿ

**7) ತದ್ಧಿತಾಂತಾವ್ಯಯಗಳು:**

ನಾಮಪದಗಳ ಮುಂದೆ ಅಂತೆ, ವೊಲ್, ವೊಲು, ವೋಲು, ತನಕ, ವರೆಗೆ, ಮಟ್ಟಿಗೆ, ಓಸ್ಕರ, ಇಂತ, ಆಗಿ, ಓಸುಗ ಇತ್ಯಾದಿ ಪ್ರತ್ಯಯಗಳು ಸೇರಿ ತದ್ಧಿತಾಂತಾವ್ಯಯಗಳಾಗುತ್ತವೆ.

**8) ಅವಧಾರಣಾರ್ಥಕಾವ್ಯಯ:**

ನಿಶ್ಚಯಾರ್ಥದಲ್ಲಿ ಬರುವ 'ಏ' ಕಾರವೇ ಅವಧಾರಾಣರ್ಥಕಾವ್ಯಯವೆನಿಸುತ್ತದೆ (ಹಲವು ವಸ್ತುಗಳಲ್ಲಿ ಇದನ್ನು ನಿಶ್ಚಯಿಸುವುದೇ ಅವಧಾರಣೆ)

**ಉದಾ:** ಅವಳೆ ನನ್ನ ಮಗಳು
ಅದನ್ನು ಬರೆದವನು ನಾನೇ
ನೀವೇ ಅದನ್ನು ಮಾಡಿದವರು

## 12. ಅಲಂಕಾರ

ಕಾವ್ಯದ ಭಾಷೆ ಆಡುಮಾತಿಗಿಂತ ಭಿನ್ನವಾಗಿರುತ್ತದೆ. ಕವಿಗಳು ತಮ್ಮ ಕಾವ್ಯದಲ್ಲಿ ಆಕರ್ಷಕ ಮಾತುಗಳನ್ನು ಬಳಸಿ, ಕಾವ್ಯದ ಸೊಬಗನ್ನು ಹೆಚ್ಚಿಸುತ್ತಾರೆ. ಹೀಗೆ ಸಾಹಿತ್ಯದಲ್ಲಿ ಭಾಷೆಗೆ ಸೌಂದರ್ಯವನ್ನು ತಂದುಕೊಡುವ ಸಾಧನವನ್ನು 'ಅಲಂಕಾರ' ಎನ್ನುವರು.

**ಅಲಂಕಾರದಲ್ಲಿ ಮುಖ್ಯವಾಗಿ 2 ವಿಧ**

**1) ಶಬ್ದಾಲಂಕಾರ 2) ಅರ್ಥಾಲಂಕಾರ**

**I. ಶಬ್ದಾಲಂಕಾರ:–**

ಶಬ್ದದಿಂದಲೇ ಕಾವ್ಯಕ್ಕೆ ಸೊಗಸುಂಟಾದರೇ ಅದನ್ನು ಶಬ್ದಾಲಂಕಾರ ಎನ್ನುವರು.

ಉದಾ: ಒಂದು ಶಬ್ದವನ್ನು ಬಳಸಿದಾಗ ಅಲ್ಲಿ ಸೊಗಸಿದ್ದು ಅದೇ ಅರ್ಥದ ಮತ್ತೊಂದು ಶಬ್ದವನ್ನು ಬಳಸಿದಾಗ ಅಲ್ಲಿಂದ ಸೊಗಸು ಮಾಯವಾದರೆ ಅದನ್ನು ಶಬ್ದಾಲಂಕಾರ ಎಂದು ಕರೆಯುತ್ತಾರೆ. ಇದರಲ್ಲಿ ಅನೇಕ ಬಗೆಗಳಿವೆ.

ಪ್ರಾಸ, ಅನುಪ್ರಾಸ, ಯಮಕ, ಚಿತ್ರಕವಿತ್ವ ಇತ್ಯಾದಿ

**ಎ) ಪ್ರಾಸ:–**

ಯಾವುದಾದರೊಂದು ಅಕ್ಷರ ನಿಯಮಿತ ಸ್ಥಾನದಲ್ಲಿ ಮತ್ತೆ–ಮತ್ತೆ ಪುನರಾವರ್ತನೆಯಾದರೆ ಅದನ್ನು ಪ್ರಾಸ ಎನ್ನುವರು.

ಉದಾ: ಆದಿಪ್ರಾಸ, ಅಂತ್ಯಪ್ರಾಸ

ಆದಿಪ್ರಾಸ:– ಪದ್ಯದೊಳಗಿನ ಶಬ್ದದ ಆದಿಯಲ್ಲಿ ಒಂದೇ ಅಕ್ಷರ ಪುನಃ ಪುನಃ ಬಂದರೆ ಅದೇ ಆದಿಪ್ರಾಸ.

ಅಂತ್ಯಪ್ರಾಸ:– ಪದ್ಯದ ಸಾಲುಗಳ ಅಂತ್ಯದ ಪದಗಳಲ್ಲಿ ಒಂದೇ ಅಕ್ಷರ ಪುನಃ ಪುನಃ ಬಂದರೇ ಅದೇ ಅಂತ್ಯಪ್ರಾಸ.

ಉದಾ: ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ (ಅಂತ್ಯಪ್ರಾಸ)

**ಬಿ) ಅನುಪ್ರಾಸ:–** ಯಾವುದಾದರೊಂದು ಅಕ್ಷರ ಮತ್ತೆ–ಮತ್ತೆ ಪುನಾವರ್ತನೆಯಾದರೆ ಅದು ಅನುಪ್ರಾಸ.

ಉದಾ:

"ಲಲಿತಲವಂಗಲತಾಪರಿಶೀಲನಾಕೋಮಲಮಲಯಸಮೀರೆ"

ಅರ್ಥ – ತಂಗಾಳಿ ಬೀಸಿತು. ಇಲ್ಲಿ 'ಲ' ಎನ್ನುವುದು ಅನುಪ್ರಾಸ.

**ಸಿ) ಯಮಕ:–** ಒಂದು ಪದವೇ ಮತ್ತೆ–ಮತ್ತೆ ಪುನರಾವರ್ತನೆಯಾದರೆ ಅದು ಯಮಕ ಒಂದು ಪದವೇ ಪದ್ಯದ ಆದಿ, ಮಧ್ಯ ಮತ್ತು ಅಂತ್ಯದ ಸ್ಥಾನಗಳಲ್ಲಿ ನಿಯಮಿತವಾಗಿ ಬರುತ್ತದೆ.

**ಡಿ) ಚಿತ್ರಕವಿತ್ವ:–** ಅಕ್ಷರಗಳನ್ನು, ಪದಗಳನ್ನು ಕುಶಲತೆಯಿಂದ ಜೋಡಿಸಿ ಉಂಟುಮಾಡುವ ಶಬ್ದ ವೈಚಿತ್ರ್ಯಕ್ಕೆ ಚಿತ್ರಕವಿತ್ವ ಎನ್ನುತ್ತಾರೆ.

downloaded from: www.kpscvaani.com


## II. ಅರ್ಥಾಲಂಕಾರ:–

ಎಲ್ಲಿ ಅರ್ಥದಿಂದ ಕಾವ್ಯಕ್ಕೆ ಸೊಗಸುಂಟಾಗುವುದೋ ಅದನ್ನ ಅರ್ಥಾಲಂಕಾರ ಎನ್ನುವರು.

**1) ಉಪಮಾಲಂಕಾರ**
**2) ರೂಪಕಾಲಂಕಾರ**
**3) ಉತ್ಪ್ರೇಕ್ಷಾಲಂಕಾರ**
**4) ದೃಷ್ಟಾಂತಾಲಂಕಾರ**
**5) ಶ್ಲೇಷಾಲಂಕಾರ**

**1) ಉಪಮಾಲಂಕಾರ:–**

ಉಪಮೆ ಎಂದರೆ ಹೋಲಿಕೆ ಎಂದರ್ಥ. ಎರಡು ವಸ್ತುಗಳಲ್ಲಿರುವ ಸಾದೃಶ್ಯವನ್ನು ಹೋಲಿಕೆ ಮಾಡಿ ಉಪಮಾಲಂಕಾರ ಎನ್ನುವರು.

**ಉದಾ:** ಅವಳ ಮುಖ ಚಂದ್ರನಂತೆ ಹೊಳೆಯುತ್ತದೆ.
ಉಷಾ ಜಿಂಕೆಯಂತೆ ಓಡುತ್ತಾಳೆ.

**ಉಪಮಾಲಂಕಾರದಲ್ಲಿ 4 ಅಂಶಗಳಿವೆ.**

1) ಉಪಮಾನ
2) ಉಪಮೇಯ
3) ಉಪಮವಾಚಕ
4) ಸಾಮಾನ್ಯ ಧರ್ಮ

ಈ ನಾಲ್ಕು ಅಂಶಗಳಿದ್ದರೆ ಅದನ್ನ 'ಪೂರ್ಣ ಉಪಮಾಲಂಕಾರ' ಎನ್ನುವರು.

**ಉದಾ:** ಉಪಮಾನ – ಉಷಾ
ಉಪಮೇಯ – ಜಿಂಕೆ
ಉಪಮಚಾಚಕ – ಅಂತೆ
ಸಾಮಾನ್ಯ ಧರ್ಮ – ಓಡುತ್ತಾಳೆ

ಕೆಲವೊಮ್ಮೆ ಇವುಗಳಲ್ಲಿ ಯಾವುದಾದರೊಂದು ಲೋಪವಾಗುವುದೇ ಎಂಬುದುಂಟು ಅದನ್ನು ಲುಪ್ತೋಪಮೆ ಎನ್ನುವರು.

**ಉದಾ:** ಜೀವನ ಕಾಮನ ಬಿಲ್ಲಿನಂತೆ
ಉಪಮಾನ – ಜೀವನ
ಉಪಮೇಯ – ಕಾಮನಬಿಲ್ಲು
ಉಪಮಾವಾಚಕ – ಬಿಲ್ಲಿನಂತೆ
ಸಾಮಾನ್ಯ ಧರ್ಮ – ಇಲ್ಲಿ ಲೋಪವಾಗಿದೆ

**2) ರೂಪಕಾಲಂಕಾರ:–**

ಎರಡು ವಸ್ತುವಿನ ಸಾದೃಶ್ಯ ಸಂಪತ್ತನ್ನ ಹೇಳುವುದು ಉಪಮಾಲಂಕಾರವಾದರೇ "ಈ ವಸ್ತುವೇ ಅದು" ಎಂದು ಹೇಳುವುದೇ ರೂಪಕ ಅಲಂಕಾರ ಎನ್ನುವರು.
'ಹರಳೀಕರಣಗೊಂಡ ಉಪಮ ಅಲಂಕಾರವೇ ರೂಪಕ ಅಲಂಕಾರ' ಇದು ಹೆಚ್ಚು ಅರ್ಥಪೂರ್ಣವಾದದ್ದು 'ಉಷಾ ಜಿಂಕೆಯಂತೆ ಓಡುತ್ತಾಳೆ' ಎಂಬುದು ಉಪಮ ಅಲಂಕಾರವಾದರೆ ಉಷಾ ಜಿಂಕೆ ಎಂಬುದು ರೂಪಕ ಅಲಂಕಾರ.
ಉದಾ: ಮುಖಚಂದ್ರ ಅಥವಾ ಹಾಸ್ಯಚಂದ್ರ ಎಂಬುದು ರೂಪಕ ಅಲಂಕಾರ

**ರೂಪಕಾಲಂಕಾರದಲ್ಲಿ 2 ವಿಧ**

**1) ಅಭೇದ್ಯ ರೂಪಕ**
**2) ತಾದೃಷ್ಯ ರೂಪಕ**

ಅಭೇದ್ಯ ರೂಪಕ:– ಒಂದು ಮತ್ತೊಂದೆಯೇ ಎಂಬುದು ಅಭೇದ್ಯ ರೂಪಕ.
ತಾದೃಶ್ಯ ರೂಪಕ:– ಉಷಾ ಮತ್ತೊಂದು ಜಿಂಕೆಯೇ ಎಂಬುದು ತಾದೃಷ್ಯ ರೂಪಕ.
ಕುಮಾರವ್ಯಾಸನನ್ನು 'ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎನ್ನುವರು.

**3) ಉತ್ಪ್ರೇಕ್ಷಾಲಂಕಾರ:–**

ಒಂದು ಪದಾರ್ಥವನ್ನಾಗಲೀ, ಸನ್ನಿವೇಶವನ್ನಾಗಲೀ ಮತ್ತೊಂದನ್ನಾಗಿ ಭಾವಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.
